ಜುಲೈ–ಸೆಪ್ಟೆಂಬರ್ 2026

ಸಂಪುಟ : 8 ಸಂಚಿಕೆ : 3

ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ



ಶ್ರೀ ಎಸ್. ರುದ್ರಪ್ಪರವರ ತೋಟ, ಅರಕನಾಳು ಗ್ರಾಮ, ಚನ್ನಗಿರಿ ತಾಲ್ಲೂಕು

ವಾರ್ಷಿಕ ಸರ್ವ ಸದಸ್ಯರ ಸಭೆ 2025–26ರ ವಿವರಗಳು.









ದಿನಾಂಕ: 26–09–2026 ರಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ವತಿಯಿಂದ 2025–26ನೇ ಸಾಲಿನ 13ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಅಲ್ಯುಮ್ನಿ ಅಸೋಸಿಯೇಷನ್ ಸಭಾಂಗಣ, ಯು.ಎ.ಎಸ್(ಬಿ), ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನಡೆಸಲಾಯಿತು. ಸಭೆಯ ಪೂರ್ವದಲ್ಲಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿವಂಗತ ಎ.ಎಸ್. ಸದಾಶಿವಯ್ಯ ಹಾಗೂ ದಿವಂಗತ ಟಿ.ಹೆಚ್. ಮಲ್ಲಿಕಾರ್ಜುನ ಅವರ ಹೆಸರಿನಲ್ಲಿ ನೀಡಲಾಗುವ ಕೃಷಿಅರಣ್ಯ ಸಾಧಕ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾ–ಯಿತು.

ಎ.ಎಸ್. ಸದಾಶಿವಯ್ಯ ಕೃಷಿಅರಣ್ಯ ಸಾಧಕ ಪ್ರಶಸ್ತಿಯನ್ನು ರೈತರಾದ ಶ್ರೀಮತಿ ಶಾಂತಮ್ಮ ವೈ.ಸಿ. ಹಾಗೂ ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಯಾದ ಶ್ರೀ ಮಂಜುನಾಥ ಗಣಪತಿ ನಾಯಕ್ ಅವರಿಗೆ ಮತ್ತು ಟಿ.ಹೆಚ್. ಮಲ್ಲಿಕಾರ್ಜುನ ಕೃಷಿಅರಣ್ಯ ಸಾಧಕ ಪ್ರಶಸ್ತಿಯನ್ನು ರೈತರಾದ ಶ್ರೀ ಅರುಣ್ ಕುಮಾರ್ ಎಸ್.ಆರ್. ಅವರಿಗೆ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರಿಗೆ ಶಾಲು, ಹಾರ, ಮೈಸೂರು ಪೇಟ, ಪ್ರಶಸ್ತಿ ಪತ್ರ, ಡ್ರೈಫ್ರೂಟ್ ಬಾಕ್ಸ್, ನೆನಪಿನ ಕಾಣಿಕೆ ಹಾಗೂ ಗೌರವಧನ ನೀಡಿ ಸನ್ಮಾನಿಸಲಾಯಿತು. ಪುರಸ್ಕೃತರು ತಮ್ಮ ಕೃಷಿಅರಣ್ಯ ಕ್ಷೇತ್ರದ ಅನುಭವಗಳನ್ನು ಹಂಚಿಕೊಂ–ಡರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಮೀನಾಕ್ಷಿ ನೇಗಿ, ಭಾ.ಅ.ಸೇ, ಪ್ರ.ಮು.ಅ.ಸಂ (ಅ.ಪ.ಮು) ಹಾಗೂ ಶ್ರೀ ಆರ್.ಎಂ. ಪಾಲಣ್ಣ, ಭಾ.ಅ.ಸೇ (ನಿ) ಭಾಗವಹಿಸಿದ್ದರು. ಪದ್ಮಶ್ರೀ ಪುರಸ್ಕೃತರಾದ ಡಾ. ಎಸ್. ಜಿ. ಸುಶೀಲಮ್ಮ ಅವರಿಗೆ 2026ರ ಪದ್ಮಶ್ರೀ ಪುರಸ್ಕಾರ ಸುಮಂಗಲಿ ಸೇವಾಶ್ರಮದ ಅಧ್ಯಕ್ಷರು, ಹಾಗೂ ಶ್ರೀ ಅಜಯ್ ಮಿಶ್ರಾ, ಭಾ.ಅ.ಸೇ (ನಿ) ಅವರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು. ನಂತರ ಪದ್ಮಶ್ರೀ ಎಸ್.ಜಿ. ಸುಶೀಲಮ್ಮ ಹಾಗೂ ಡಾ. ಮೀನಾಕ್ಷಿ ನೇಗಿ, ಭಾ.ಅ.ಸೇ. ಅವರಿಗೆ ಭಾರತ್ ಗೌರವ್ ಮತ್ತು ಲೈಫ್‌ಟೈಮ್ ಅಚೀವ್‌ಮೆಂಟ್ ಪ್ರಶಸ್ತಿ ದೊರೆತಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ವತಿಯಿಂದ ವಿಶೇಷವಾಗಿ ಗೌರ–ವಿಸಲಾಯಿತು.

ನಂತರ ವಾರ್ಷಿಕ ಸಭೆಯಲ್ಲಿ ಪ್ರಾರ್ಥನೆ, ಸ್ವಾಗತ, ಹಿಂದಿನ ಸಭೆಯ ನಡಾವಳಿಗಳ ಅನುಮೋದನೆ, ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳ ಪರಿಶೀಲನೆ, ಸಂಸ್ಥೆಯ ಮುಂದಿನ ಚಟುವಟಿಕೆಗಳು ಮತ್ತು ಕೃಷಿಅರಣ್ಯ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಸಲಹೆಗಳ ಕುರಿತು ಚರ್ಚಿಸಲಾಯಿತು. ಅಧ್ಯಕ್ಷರ ಭಾಷಣ ಹಾಗೂ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸುಭಾಷಿತ:

ಕೃಷಿಃ ಜೀವನಮೂಲಂ,
ಕೃಷಿಃ ಲೋಕಸ್ಯ ಪಾಲನಮ್।
ಕೃಷಕಃ ಅನ್ನದಾತಾ,
ಕೃಷಿರಾಷ್ಟ್ರಸ್ಯ ಸಂಪದಃ॥

ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

Volume: 8 **Issue: 3**
ಸಂಪುಟ: 8 ಸಂಚಿಕೆ: 3

ಸಂಪಾದಕೀಯ ಮಂಡಳಿ

ಗೌರವ ಸಂಪಾದಕರು

ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು, ಕೆ.ಎಸ್.ಎಸ್.ಸಿ.ಎ(ನಿ)

ಪ್ರಧಾನ ಸಂಪಾದಕರು

ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ(ನಿ)

ಸಂಪಾದಕರು

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

ಸದಸ್ಯರು

ಡಾ. ಎಸ್. ರಮೇಶ್, ಭಾ.ಅ.ಸೇ(ನಿ)
ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)
ಡಾ. ಎ.ಬಿ. ಪಾಟೀಲ, ರಜಿಸ್ಟ್ರಾರ್(ನಿ)
ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)
ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು
ಶ್ರೀ ಮಲ್ಲೇಶ್ ಲಿಂಗಾಚಾರ್, ತಂತ್ರಜ್ಞರು
ಡಾ. ಚಂದ್ರಶೇಖರ ಮ. ಬಿರಾದಾರ
ಡಾ. ಟಿ.ಆರ್. ಗುರುಪ್ರಸಾದ್

ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com
www.iaft.co.in

ಮನವಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಬೆಂಗಳೂರು ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಕೃಷಿಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಸೇವೆಯ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಪ್ರಾಧ್ಯಾಪಕರು (ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ), ಪ್ರಗತಿಪರ ರೈತರು, ಕೈಗಾರಿಕೋದ್ಯಮಿಗಳು ಹಾಗೂ ತಂತ್ರಜ್ಞರು ಸದಸ್ಯರಾಗಿರುತ್ತಾರೆ. ಅನುಭವಿ ತಜ್ಞರನ್ನು ಹೊಂದಿರುವ ಈ ಸಂಸ್ಥೆಯು ಸರ್ಕಾರದ ಅರಣ್ಯ, ಕೃಷಿ, ತೋಟಗಾರಿಕಾ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಾಗಿ ಕೃಷಿಅರಣ್ಯ ಪ್ರೋತ್ಸಾಹಿಸಲು ತಾಂತ್ರಿಕ ಸಲಹೆ ಹಾಗೂ ಸಹಕಾರ ನೀಡುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in) ದಲ್ಲಿ ಲಭ್ಯವಿರುವ ಅರ್ಜಿ ನಮೂನೆಯ ಪ್ರತಿಯ ನಕಲು ಇಳಿಸಿ ಭರ್ತಿ ಮಾಡಿ, ನಿಗದಿತ ಸದಸ್ಯತ್ವ ಶುಲ್ಕವನ್ನು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ (IAFT) ಈ ಕೆಳಗಿನ ಬ್ಯಾಂಕ್ ಖಾತೆಗೆ ಚೆಕ್ ಅಥವಾ ಡಿಡಿ ಅಥವಾ ನೆಫ್ಟ್ (NEFT) ಅಥವಾ ಯುಪಿಐ (UPI) ಮುಖಾಂತರ ಪಾವತಿಸಿ ಸಂಸ್ಥೆಯ ನಿಯಮಾವಳಿಯಂತೆ (Byelaws) ಸದಸ್ಯರಾಗಬಹುದು.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424
UPI ID: 240919016115100@cnrb

ಡಾ. ಎಸ್. ರಮೇಶ್, ಕಾರ್ಯದರ್ಶಿ

ಪರಿವಿಡಿ

ಕ್ರ.ಸಂ.	ಲೇಖನ	ಪುಟ
1	ವಾರ್ಷಿಕ ಸರ್ವ ಸದಸ್ಯರ ಸಭೆ 2025–26ರ ವಿವರಗಳು.	2
2	ಬರ ಮತ್ತು ನೆರೆ ಪರಿಹಾರಕ್ಕಾಗಿ ಕೃಷಿಅರಣ್ಯಗಳು	4
3	ಪರಿಸರ ಹಾಗೂ ಅರಣ್ಯ ಮಂತ್ರಾಲಯದಿಂದ ಕೃಷಿಅರಣ್ಯದ ಪ್ರೋತ್ಸಾಹಕ್ಕಿರುವ ಹೊಸ ಡಿಜಿಟಲ್ ಯೋಜನೆಗಳು – ಇವುಗಳ ಪರಿಮಿತಿ ಹಾಗೂ ಉಪಯುಕ್ತತೆ.	5
4	ಮರದ ರೆಂಬೆ ಕೊಂಬೆ ಕತ್ತರಿಸುವಿಕೆ (Pruning)	7
5	ಕೃಷಿ–ಅರಣ್ಯ: ಮರಗಳೊಂದಿಗೇ ಕೃಷಿ ಅವಕಾಶಗಳಿದ್ದರೂ ಅಳವಡಿಕೆಯಲ್ಲಿ ಏಕೆ ಹಿಂಜರಿಕೆ?	12
6	ಜುಲೈ–ಸೆಪ್ಟೆಂಬರ್ 2026 ರಲ್ಲಿ ನಡೆದ ಕಾರ್ಯಕ್ರಮಗಳು.	14

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಸದಸ್ಯತ್ವ

ಸದಸ್ಯತ್ವ ವಿವರ	ಶುಲ್ಕ (ರೂ.)
ಸಂಸ್ಥಾ ಸದಸ್ಯತ್ವ	25,000.00
ಪೋಷಕ ಸದಸ್ಯತ್ವ	20,000.00
ಆಜೀವ ಸದಸ್ಯತ್ವ	5,000.00
ರೈತ ಸದಸ್ಯತ್ವ	2,000.00

Publisher: IAFT. Chief Editor: N. D. Tiwari, IFS (Retd). KRUSHIVANA, Quarterly News Letter, July-September 2026. Volume 8, Issue 3.
Printed By: S. K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bengaluru-560019



ಸಂಪಾದಕೀಯ....

ಬರ ಮತ್ತು ನೆರೆ ಪರಿಹಾರಕ್ಕಾಗಿ ಕೃಷಿಅರಣ್ಯಗಳು

ಎನ್.ಡಿ. ತಿವಾರಿ, ಭಾ.ಅ.ಸೇ (ನಿ) / ಅಧ್ಯಕ್ಷರು

ಬರ ಬಂದಾಗ ಮರಗಳ ನೆನಪು ಎಲ್ಲರಲ್ಲೂ ಮರುಕಳಿಸುತ್ತದೆ. ಪ್ರಸಕ್ತ ಸಾಲಿನಲ್ಲಿ ವಿಶ್ವದಾದ್ಯಂತ ನೈಸರ್ಗಿಕವಾಗಿ ಸಂಭವಿಸುತ್ತಿರುವ ಹಲವು ವಿದ್ಯಮಾನಗಳು ಹವಾ–ಮಾನ ಬದಲಾವಣೆಯ ಕರಿಛಾಯೆಯನ್ನು ಪ್ರತಿಬಿಂಬಿಸುತ್ತಿವೆ. ಒಂದೆಡೆ ಬರ ಆವರಿಸಿದರೆ, ಮತ್ತೊಂದೆಡೆ ಮಹಾಪೂರ ಉಂಟಾಗುತ್ತಿದೆ. ಈ ಎರಡೂ ಘಟ–ನೆಗಳು ಮಾನವನ ಅಭಿವೃದ್ಧಿಗೆ ಮಾರಕವಾಗಿವೆ. ಇದರ ಜೊತೆಗೆ ಜಾಗತಿಕ ಉಷ್ಣಾಂಶದ ಏರಿಕೆಯಿಂದಾಗಿ ವಿಶ್ವದ ಅನೇಕ ಕಡೆಗಳಲ್ಲಿ ಅರಣ್ಯಗಳು ಬೆಂಕಿಗೆ ಆಹುತಿಯಾಗುತ್ತಿವೆ. ಇವೆಲ್ಲದರ ಪರಿಣಾಮವಾಗಿ ಈಗಾಗಲೇ ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್ ಪ್ರಮಾಣ ನಿಗದಿತ ಮಿತಿಗಿಂತ ಹೆಚ್ಚಾಗುತ್ತಿರುವುದು ಎಲ್ಲರನ್ನೂ ಯೋಚಿಸುವಂತೆ ಮಾಡಿದೆ. ಪ್ರಕೃತಿಯಲ್ಲಿ ಸಂಭವಿಸುತ್ತಿರುವ ಈ ಎಲ್ಲ ಬದಲಾವಣೆಗಳು ಅಂತಿಮವಾಗಿ ಮಾನವನ ವಿನಾಶಕ್ಕೆ ಕಾರಣವಾಗಬಹುದೇ ಎಂಬ ಆತಂಕ ಮೂಡುತ್ತಿದೆ.

ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿರಲೇಬೇಕು ಅಲ್ಲವೇ? ಈ ಹಿನ್ನೆಲೆಯಲ್ಲಿ "ಮರ ದೇವರು ಕೊಟ್ಟಿರುವ ವರ" ಎಂಬ ಮಾತು ಮತ್ತಷ್ಟು ಅರ್ಥಪೂರ್ಣವೆನಿಸುತ್ತದೆ. ಹಸಿರು ಸಂಪತ್ತಿನ ವಿನಾಶವೇ ಮಾನವನ ವಿನಾಶಕ್ಕೆ ಕಾರಣವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಮರಗಳನ್ನು ಬೆಳೆಸಲು ಸಮಯ ಬೇಕು. ಅದಕ್ಕೆ ಸ್ಥಳಾವಕಾಶವೂ ಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ ಮರಗಳನ್ನು ಬೆಳೆಸುವ ಮನಸ್ಸು ಮತ್ತು ಇಚ್ಛಾಶಕ್ತಿ ಬೇಕು. ಈ ಇಚ್ಛಾಶಕ್ತಿಯ ಕೊರತೆಯೇ ಇಂದು ನಮ್ಮನ್ನು ಕಾಡುತ್ತಿರುವ ಬಹುದೊಡ್ಡ ದುರಂತಗಳಲ್ಲಿ ಒಂ–ದಾಗಿದೆ.

ಸಾಮಾನ್ಯ ಜನರು, ರೈತರು, ಅರಣ್ಯ ಇಲಾಖೆಯ ಸಿಬ್ಬಂದಿ, ರಾಜಕೀಯ ಮುಖಂಡರು ಹಾಗೂ ಸರ್ಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಳಹಂತದಿಂದ ಮೇಲಿನ ಹಂತದವರೆಗಿನ ಅಧಿಕಾರಿ ವರ್ಗದಲ್ಲಿ ಪರಿಸರ ಸಂರಕ್ಷಣೆಯ ಕುರಿತಾದ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಇದರ ಪರಿಣಾಮವಾಗಿ ನಮ್ಮ ಸುತ್ತಲಿನ ಪರಿಸರದಲ್ಲಿ ಹಸಿರಿನ ನಾಶ, ಪರಿಸರ ಮಾಲಿನ್ಯ, ನೀರಿನ ಅಭಾವ, ಮಳೆಯ ಕೊರತೆ, ಬೆಳೆಗಳ ಇಳುವರಿಯಲ್ಲಿ ಕುಸಿತ ಹಾಗೂ ಆಹಾರದ ಕೊರತೆಯಂತಹ ಸಮಸ್ಯೆಗಳು ಉಂಟಾಗುತ್ತಿವೆ.

ಆದರೂ ಅಲ್ಲೊಂದು–ಇಲ್ಲೊಂದು ಎನ್ನುವಂತೆ ಅತ್ಯುತ್ತಮ ಕಾರ್ಯಗಳು "ಮರುಭೂಮಿಯಲ್ಲಿನ ಓಯಸಿಸ್" ನಂತೆ ನಡೆಯುತ್ತಿವೆ. ಇಂತಹ ಅಪರೂ–ಪದ ಕಾರ್ಯಕ್ರಮಗಳು ಸಾಮಾನ್ಯ ಕಾರ್ಯಗಳಾಗಿ ಪರಿವರ್ತನೆಯಾದರೆ, ಇಂದು ನಮ್ಮನ್ನು ಕಾಡುತ್ತಿರುವ ಅನೇಕ ಪರಿಸರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆನಿಸುತ್ತದೆ.

ಇವುಗಳಲ್ಲಿ ಬಹುಮುಖ್ಯವಾದ ಉದಾಹರಣೆಯೆಂದರೆ, ಪ್ರಸಕ್ತ ಸಾಲಿನಲ್ಲಿ ಬೆಂ–ಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಬೃಹತ್ ಹಸಿರು ಅಭಿಯಾನ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಮಿಯಲ್ಲಿ 15 ಲಕ್ಷ ಮರಗಿಡಗಳನ್ನು ಒಂದೇ ದಿನದಲ್ಲಿ ನೆಡುವ ಕಾರ್ಯಕ್ರಮವು ಅತ್ಯಂತ ಮಹತ್ವದ ಹಾಗೂ ಸ್ಮರಣೀಯ ಪ್ರಯತ್ನವಾಗಿದೆ. ಈ ಕಾರ್ಯಕ್ರಮಕ್ಕೆ ನೇತೃತ್ವ ನೀಡಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯೊಂದಿಗೆ ಕೈಜೋಡಿಸಿದ ಅನೇಕ ಸಂಘ–ಸಂಸ್ಥೆಗಳು ಅಭಿನಂದನೆಗೆ ಅರ್ಹರಾಗಿದ್ದಾರೆ.

ಬೆಂಗಳೂರಿನಲ್ಲಿ ಹಸಿರು ಹೊದಿಕೆಯ ಪ್ರಮಾಣವು 1970ರಲ್ಲಿ ಶೇ. 67ರಷ್ಟಿದ್ದು, ಇತ್ತೀಚಿನ ವರ್ಷಗಳಲ್ಲಿ ಅದು ಶೇ. 3ಕ್ಕೆ ಕುಸಿದಿರುವುದು ಆತಂಕಕಾರಿ ಸಂಗತಿ–ಯಾಗಿದೆ. ಹಸಿರು ಹೊದಿಕೆಯ ಇಳಿಕೆಯಿಂದಾಗಿ ಬೆಂಗಳೂರಿನಲ್ಲಿ ವರ್ಷದಿಂದ ವರ್ಷಕ್ಕೆ ಉಷ್ಣಾಂಶ ಹೆಚ್ಚಳ, ಪರಿಸರ ಮಾಲಿನ್ಯ ಹಾಗೂ ನೀರಿನ ಅಭಾವದಂ–ತಹ ಸಮಸ್ಯೆಗಳು ತೀವ್ರಗೊಳ್ಳುತ್ತಿವೆ. ಒಂದಾನೊಂದು ಕಾಲದಲ್ಲಿ ಬೆಂಗಳೂರನ್ನು "ಹಸಿರು ನಗರ", "ಗಾರ್ಡನ್ ಸಿಟಿ" ಹಾಗೂ "ಕೂಲ್ ಸಿಟಿ" ಎಂದು ಕರೆಯಲಾಗುತ್ತಿತ್ತು. ಬಹುಶಃ ಅಂದಿನ ದಿನಗಳಲ್ಲಿ ಹವಾನಿಯಂತ್ರಣ ಯಂತ್ರಗಳ ಅವಶ್ಯಕತೆಯೇ ಇರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅವುಗಳಿಲ್ಲದೆ ಬದುಕು–ವುದು ಕಷ್ಟವೆನಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇಷ್ಟೆಲ್ಲಾ ಐಷಾರಾಮಿ ಉಪಕರಣಗಳಿದ್ದರೂ, ಅವುಗಳು ಕಾರ್ಯನಿರ್ವಹಿಸಲು ಅಗತ್ಯವಾದ ವಿದ್ಯುತ್‌ನ ಕೊರತೆಯೂ ಎದುರಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಮಳೆಯ ಕೊರತೆಯಿಂದಾಗಿ ಜಲವಿದ್ಯುತ್ ಉತ್ಪಾದನೆ ಕುಂಠಿತವಾಗಿದೆ. ಅದರಂತೆಯೇ ಉಷ್ಣವಿದ್ಯುತ್ ಸ್ಥಾವರಗಳಿಗೆ ಅಗತ್ಯವಾದ ಕಲ್ಲಿದ್ದಲಿನ ಕೊರತೆಯೂ ಎದುರಾಗಿದೆ. ಇಂತಹ ಬಿಗಡಾಯಿಸಿದ ಪರಿಸ್ಥಿತಿಯನ್ನು ನಿಭಾಯಿಸಲು ಸೌರಶಕ್ತಿ ಮತ್ತು ಪವನ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೆಚ್ಚಾಗಿ ಅವಲಂಬಿಸಬೇಕಾಗಿದೆ. ಆದರೆ, ಇವುಗಳನ್ನು ಸ್ಥಾಪಿಸಲು ಹೆಚ್ಚಿನ ಹಣ ಮತ್ತು ಸಮಯದ ಅಗತ್ಯವಿದೆ.

ದೇಶದಲ್ಲಿ ಕಲ್ಲಿದ್ದಲಿನ ಕೊರತೆ ಉಂಟಾಗಲು ಜಾಗತಿಕವಾಗಿ ಹೆಚ್ಚುತ್ತಿರುವ ಉಷ್ಣಾಂಶವೂ ಒಂದು ಕಾರಣವಾಗಿದೆ. ಉಷ್ಣಾಂಶ ಹೆಚ್ಚಾಗುತ್ತಿರುವುದರಿಂದ ವಿದ್ಯುತ್ ಬಳಕೆ ವಿಪರೀತವಾಗಿ ಹೆಚ್ಚಿದ್ದು, ಕಲ್ಲಿದ್ದಲಿನ ದಾಸ್ತಾನು ತೀರಾ ಕಡಿಮೆಯಾಗುತ್ತಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಕಲ್ಲಿದ್ದಲು ದೊರೆಯುವ ಪ್ರದೇಶಗಳಲ್ಲಿ ಅತಿಯಾದ ಮಳೆಯಿಂದಾಗಿ ಗಣಿಗಳು ಜಲಾವೃತವಾಗುತ್ತಿರುವುದರಿಂದ ಕಲ್ಲಿದ್ದಲು ಉತ್ಪಾದನೆಯೂ ಕಡಿಮೆಯಾಗುತ್ತಿದೆ.

ಈ ವರ್ಷ ಸೂಪರ್ ಎಲ್–ನಿನೋ ಪರಿಣಾಮದಿಂದಾಗಿ ಕರ್ನಾಟಕದಲ್ಲಿ ಮುಂಗಾರು ಮತ್ತು ಹಿಂಗಾರು ಮಳೆ ಸಮರ್ಪಕವಾಗಿ ಆಗದೆ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಈ ಎಲ್ಲ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಅಲ್ಲಲ್ಲಿ ಅಕಾಲಿಕ ಮಳೆಯಾಗುತ್ತಿರುವುದು, ಜನರಿಗೆ ಬೆಳೆ ಬೆಳೆಯಲು ಸಾಧ್ಯವಾಗದಿದ್ದರೂ, ಕನಿಷ್ಠ ನೀರಿನ ಅಭಾವವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ನೆರವಾಗಬಹುದು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಈ ಅಕಾಲಿಕ ಮಳೆಯು ಬಹುವಾರ್ಷಿಕ ಮರಗಳ ಬೆಳವಣಿಗೆಗೆ ವರದಾನವಾಗಲಿದೆ.

ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಸುವುದರಿಂದ ಇಂತಹ ಸಂದಿಗ್ಧ ಪರಿಸ್ಥಿತಿಗಳನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ಹಿಂದೆಲ್ಲಾ ಬರಗಾಲ ಬಂ–ದಾಗ ಕಾಡಿನಿಂದ ಸೊಪ್ಪು, ಹುಲ್ಲು ಮತ್ತು ಮೇವನ್ನು ತಂದು ದನಗಳನ್ನು ಸಾಕಲಾಗುತ್ತಿತ್ತು. ಆದರೆ, ಇಂದು ಕೃಷಿ ಭೂಮಿಯ ಸಮೀಪದಲ್ಲಿದ್ದ ಕಾಡುಗಳೆಲ್ಲ ಮಾಯವಾಗಿರುವುದರಿಂದ ಅಂತಹ ವ್ಯವಸ್ಥೆ ಬಹುತೇಕ ಅಸಾಧ್ಯವಾಗಿದೆ. ಇಂತಹ ಸನ್ನಿವೇಶಗಳು ಎದುರಾದಾಗ ಮುಂದೆ ಏನು ಮಾಡಬೇಕು ಎಂಬ ಚಿಂತೆ ಕಾಡುತ್ತದೆ.

ಇದಕ್ಕೆ ಉತ್ತರವನ್ನು ಹುಡುಕುವಾಗ ನಮ್ಮೆಲ್ಲರ ಮುಂದೆ ಕಾಣಿಸಿಕೊಳ್ಳುವ ಏಕೈಕ ದಾರಿ ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಸುವುದಾಗಿದೆ. ಇಂದು ನಾವು ಅರಿತುಕೊಳ್ಳಬೇಕಾದ ಸತ್ಯವೆಂದರೆ, *"ಕೃಷಿತೋ ನಾಸ್ತಿ ದುರ್ಭಿಕ್ಷಂ, ವೃಕ್ಷೋ ನಾಸ್ತಿ ಸರ್ವನಾಶಂ"* ಎಂಬ ನಾಣ್ಣುಡಿಯಲ್ಲಿರುವ ಸಂದೇಶ. ಕೃಷಿ ಇದ್ದಲ್ಲಿ ಬರಗಾಲವನ್ನು ಎದುರಿಸುವ ಶಕ್ತಿ ದೊರೆಯುತ್ತದೆ; ಮರಗಳಿಲ್ಲದಿದ್ದರೆ ಸರ್ವನಾಶ ಅನಿವಾರ್ಯವಾಗುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಆದ್ದರಿಂದ ನಾವೆಲ್ಲರೂ ಇಂದೇ ಎಚ್ಚೆತ್ತುಕೊಂಡು, ಮುಂದೆ ಎದುರಾಗ–ಬಹುದಾದ ಪ್ರಾಕೃತಿಕ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ಜಾಗತಿಕವಾಗಿ ಏರುತ್ತಿರುವ ಉಷ್ಣಾಂಶವನ್ನು ನಿಯಂತ್ರಿಸಲು ಸಾಧ್ಯವಾದೆಡೆಯೆಲ್ಲಾ ಮರಗಳನ್ನು ಬೆಳೆಸುವ ಕೈಂಕರ್ಯದಲ್ಲಿ ತೊಡಗಿಸಿಕೊಳ್ಳಬೇಕು.

ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಸುವ ಮೂಲಕ "ಕೃಷಿಅರಣ್ಯ" ಗಳನ್ನು ನಿರ್ಮಿಸುವುದು ಇಂದಿನ ಅಗತ್ಯವಾಗಿದೆ. ಕೃಷಿ ಮತ್ತು ಅರಣ್ಯವನ್ನು ಸಮನ್ವಯಗೊಳಿಸುವ ಈ ಪದ್ಧತಿಯು ಬರಗಾಲದ ಸಂದರ್ಭದಲ್ಲಿ ರೈತರಿಗೆ ಪರ್ಯಾಯ ಆದಾಯದ ಮೂಲವಾಗುವುದರ ಜೊತೆಗೆ, ಮಣ್ಣಿನ ಸಂರಕ್ಷಣೆ, ಅಂತರ್ಜಲದ ಮರುಪೂರಣ, ಜೀವವೈವಿಧ್ಯದ ರಕ್ಷಣೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲದು.

ಹೀಗಾಗಿ, ಬರ ಮತ್ತು ನೆರೆ ಎರಡನ್ನೂ ಎದುರಿಸಲು ಕೃಷಿಅರಣ್ಯಗಳ ಅಭಿವೃದ್ಧಿ ಅತ್ಯಂತ ಪರಿಣಾಮಕಾರಿ ಹಾಗೂ ದೀರ್ಘಕಾಲೀನ ಪರಿಹಾರಗಳಲ್ಲಿ ಒಂದಾಗಿದೆ. ಮರಗಳನ್ನು ಬೆಳೆಸುವುದು ಕೇವಲ ಪರಿಸರ ಸಂರಕ್ಷಣೆಯ ಕೆಲಸವಲ್ಲ; ಅದು ನಮ್ಮ ಮುಂದಿನ ಪೀಳಿಗೆಯ ಬದುಕನ್ನು ಸುರಕ್ಷಿತಗೊಳಿಸುವ ಸಾಮಾಜಿಕ ಹೊಣೆಗಾ–ರಿಕೆಯೂ ಹೌದು.

ಪರಿಸರ ಹಾಗೂ ಅರಣ್ಯ ಮಂತ್ರಾಲಯದಿಂದ ಕೃಷಿಅರಣ್ಯದ ಪ್ರೋತ್ಸಾಹಕ್ಕಿರುವ ಹೊಸ ಡಿಜಿಟಲ್ ಯೋಜನೆಗಳು – ಇವುಗಳ ಪರಿಮಿತಿ ಹಾಗೂ ಉಪಯುಕ್ತತೆ.

ಲೇಖಕರು: ಶ್ರೀ ಅಜಯ್ ಮಿಶ್ರಾ, ಭಾ.ಅ.ಸೇ (ನಿ)
ಅನುವಾದ: ಶ್ರೀ ಶಿವಾನಂದ ಮೂರ್ತಿ, ಭಾ.ಅ.ಸೇ (ನಿ)





ಕೃಷಿಅರಣ್ಯವು ಭೂ ಬಳಕೆಯ ಒಂದು ಪದ್ಧತಿ, ಇದು ಮರಗಳನ್ನು ಕೃಷಿ ಬೆಳೆಗಳೊಂದಿಗೆ ಮತ್ತು ಜಾನುವಾರುಗಳೊಂದಿಗೆ ಸಂಯೋಜಿಸುವ ಮಹತ್ವದ ಪದ್ಧತಿ. ಇಲ್ಲಿ ಕೃಷಿಯನ್ನು ಪ್ರೇರಕ ಬಿಂದುವಾಗಿರಿಸಿಕೊಂಡು, ಅರಣ್ಯ, ಹವಾಮಾನ ಬದಲಾವಣೆ, ಗ್ರಾಮೀಣ ಜನಜೀವನವನ್ನು ಆಹಾರ ಭದ್ರತೆಗೆ ಮತ್ತು ಕೃಷಿ ಭೂಮಿಯ ಫಲವತ್ತತೆಯನ್ನು ನಿರಂತರವಾಗಿ ಕಾಯ್ದುಕೊಳ್ಳಲಾಗುವ ಮಹತ್ವದ ಪದ್ಧತಿ. ದೇಶದಲ್ಲಿ ಮರ ಬೆಳೆಯುವ ಪದ್ಧತಿಯಿಂದಾಗಿ ಶೇ 20 ರಷ್ಟು ನೈಸರ್ಗಿಕವಾದ ಇಂಗಾಲವನ್ನು ಹೊಂದಿದ್ದರೂ, ವಾರ್ಷಿಕವಾಗಿ 7 ಬಿಲಿಯನ್ ಟನ್ ಮರವನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶದ ರೈತರಿಗೆ ಮತ್ತು ಆರ್ಥಿಕತೆಗೆ ಅವ–ಕಾಶ ವಂಚನೆಯಾಗಿದೆ. 2050ರ ವೇಳೆಗೆ ಭಾರತದಲ್ಲಿ ಕೃಷಿಅರಣ್ಯವನ್ನು ಈಗಿರುವ 28.42 ಮಿಲಿಯನ್ ಹೆಕ್ಟೇರ್‌ನಿಂದ (ಶೇ 8.65% ಭೂಭಾಗ) 50 ಮಿಲಿಯನ್ ಹೆಕ್ಟೇರ್‌ಗೆ ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಇದರಿಂದ ಶೇ.85 ರಷ್ಟು ಕಚ್ಚಾ ವಸ್ತುಗಳನ್ನು ಮರ–ಆಧಾರಿತ ಕೈಗಾರಿ–ಕೆಗಳಿಗೆ ಪೂರೈಸಬಹುದು. ಮರ ಬೆಳೆಯುವ ಪದ್ಧತಿಯು ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದ್ದರೂ, ಕೃಷಿ ಕ್ಷೇತ್ರಕ್ಕೆ ಹಂಚಿಕೆಯಾಗುವ 20 ಲಕ್ಷ ಕೋಟಿ ಸಾಲದಲ್ಲಿ ಕೃಷಿ ಅರಣ್ಯ ಪ್ರೋತ್ಸಾಹಕ್ಕೆ ಶೇ.50 ರಷ್ಟನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ಇಂತಹ ಹಣಕಾಸಿನ ಸಾಲಿಗೆ ಸಂಬಂಧಿಸಿದ ವಿಚಾರಗಳು ಮತ್ತು ವಿನಿಯೋಗದಲ್ಲಿ ಎದುರಿಸಲಾಗುವ ಸವಾಲುಗಳನ್ನು ಸರಿಯಾದ ರೀತಿಯಲ್ಲಿ ನಿವಾರಿಸದಿರುವುದು ಮತ್ತು ಹಣಕಾಸಿನ ಹಂಚಿಕೆಯಲ್ಲೂ ಇರುವ ಸವಾಲುಗಳನ್ನು ಸರಿಪಡಿಸುವ ಅವಶ್ಯಕತೆಯಿದೆ. ಇದಕ್ಕೆ ಬಹು ಮುಖ್ಯ ಕಾರಣಗಳೆಂದರೆ ಮರ ಬೆಳೆಯಲು ಬೇಕಾದ ದೀರ್ಘ ಕಾಲಾ–ವಧಿ, ಭೂ ಹಿಡುವಳಿದಾರರ ಸಮಸ್ಯೆ ಮತ್ತು ಪೂರಕವಾದ ಭದ್ರತಾ ಖಾತರಿಯನ್ನು ಪಡೆಯುವುದರ ಜೊತೆಗೆ 5 ರಿಂದ 30 ವರ್ಷಗಳವರೆಗೆ ಕಾಯಬೇಕಾದ ಸ್ಥಿತಿಯು ಸಮಸ್ಯೆಯನ್ನು ಎದುರು ಮಾಡಿದೆ.

ಮರ ಆಧಾರಿತ ಕೃಷಿ ಪದ್ಧತಿಯಿಂದ ದೇಶದಲ್ಲಿ ಆಮದಿನ ಮೇಲಿ–ರುವ ಅವಲಂಬನೆ ಕಡಿಮೆಗೊಳಿಸಲು ಸಾಧ್ಯ, ಏನೆಂದರೆ ಶೇ 86 ರಷ್ಟೂ ರೈತರು ಸಣ್ಣ ಮತ್ತು ಅತಿಸಣ್ಣ ರೈತರು. ಅವರ ಆರ್ಥಿಕತೆಯನ್ನು ಗರಿಷ್ಠಗೊಳಿಸುವುದು ಅಭದ್ರ ಮಾರುಕಟ್ಟೆ ಹಾಗೂ ಲಾಭವನ್ನು ಹವಾ–ಮಾನ ಬದಲಾವಣೆಯುಂಟು ಮಾಡುವ ಭದ್ರತೆಗೆ ಕೃಷಿ ಭೂಮಿಯ ಫಲವತ್ತತೆಗೆ ಈ ಕೃಷಿಅರಣ್ಯವನ್ನು ಇಂಗಾಲದ ಮಾರುಕಟ್ಟೆಯೊಂದಿಗೆ ಜೋಡಿಸುವುದು ಅತ್ಯಾವಶ್ಯಕವಾಗಿದೆ. ಇದರೊಂದಿಗೆ ಸುಸ್ಥಿರ ನಿರ್ವಹಣೆ ಮತ್ತು ಡಿಜಿಟಲ್ ಮುಖೇನ ಪತ್ರ ಹಂಚುವುದು ಮತ್ತು ನೇರವಾಗಿ ಖಾಸಗಿಯವರೇ ರೈತರಿಂದ ಖರೀದಿಸುವುದನ್ನು ತಿಳಿಸಲಾಗಿದೆ. ಆದುದ–ರಿಂದ ಇತ್ತೀಚಿನ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆಯ ಮಂತ್ರಾಲಯದ ಹಲವು ಯೋಜನೆಗಳು ಕೃಷಿಅರಣ್ಯವನ್ನು ಡಿಜಿಟಲ್ ತಂತ್ರಾಂಶದೊಂದಿಗೆ ಸಮೀಕರಿಸಿ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಅರಣ್ಯದ ಪಾತ್ರವನ್ನು ಜಾಗತಿಕ ಹವಾಮಾನದೊಂದಿಗೆ ಬೆಸೆಯಲು ನಿರ್ಧರಿಸಲಾಗಿದೆ. ಇದೊಂದು ಕೃಷಿ ಅರಣ್ಯ ಪ್ರೋತ್ಸಾಹಕ್ಕೆ ಮೀಸ–ಲಿಡುವ ಮಹತ್ವದ ಯೋಜನೆ, ಇದರ ಪ್ರಮುಖಗಳನ್ನು ಕೆಳಗಿನಂತೆ ಚರ್ಚಿಸಲಾಗಿದೆ.

1. ರಾಷ್ಟ್ರೀಯ ಸಾಗಾಣಿಕೆ ಪಾಸ್ ಪದ್ಧತಿ (National Transit Pass System – NTPS):–

ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ: 29.12.2023 ರಂದು ಯಾವುದೇ ಅಡೆತಡೆಯಿಲ್ಲದೆ ಸಾಗಾ–ಣಿಕೆ ಪಾಸ್‌ಗಳನ್ನು ನೀಡುವ ಪದ್ಧತಿಯನ್ನು ಜಾರಿಗೆ ತಂದಿದೆ. ಇಲ್ಲಿ ಮೇಲ್ವಿಚಾರಣೆ ಮತ್ತು ದಾಖಲೆ ನಿರ್ವಹಣೆಯನ್ನು ರಾಜ್ಯದೊಳಗಡೆ / ಅಂತರ್ ರಾಜ್ಯ ಸಾಗಾಣಿಕೆ ಪಾಸ್‌ಗಳನ್ನು ಮರ–ಮುಟ್ಟು (ನಾಟ), ಬಿದಿರು ಮತ್ತು ಅರಣ್ಯ ಕಿರು ಉತ್ಪನ್ನಗಳನ್ನು ಖಾಸಗಿ ಭೂಮಿಯಿಂದ / ಖಾಸಗಿ ಡಿಪೋಗಳಿಂದ ಸಾಗಾಣಿಕೆಯನ್ನು ನಿರ್ವಹಿಸಲು ಅನುವು ಮಾಡಿದೆ. ಇದು ಒಂದು ವಸ್ತು ಆಧಾರಿತ ಮತ್ತು ವಲಯ ಆಧಾರಿತ ಅರ್ಜಿಯಾಗಿ –ಗಿರುತ್ತದೆ. ಡ್ಯಾಶ್ ಬೋರ್ಡ್‌ನಲ್ಲಿ ಯಾವ ಹಂತದಲ್ಲಿ ಅರ್ಜಿಯು ಮೇಲ್ವಿಚಾರಣೆಗೆ ನಿರ್ವಹಿಸಲಾಗುತ್ತಿದೆ ಎನ್ನುವ ಅಂಶಗಳನ್ನು ಹೊಂದಿದೆ. ಉದಾ: ಪಾಸ್ ನೀಡಲಾಗಿದೆಯೇ / ಇಲ್ಲವೇ / ಅಥವಾ ಶಿಫಾರಸ್ಸು ಮಾಡಲಾಗಿದೆಯೇ ಎಂದು ತಿಳಿಸುತ್ತದೆ.

ಈ ಪದ್ಧತಿಯು ಡಿಜಿಟಲ್ ಮಾದರಿಯ ಕ್ಯೂ.ಆರ್.ಕೋಡ್ ಪಾಸ್‌ಗಳನ್ನು ಹೊಂದಿದ್ದು, ಅವುಗಳನ್ನು ಯಾವುದೇ ಚೆಕ್ ಪೋಸ್ಟ್‌ಗಳಲ್ಲಿ ಪರಿಶೀಲಿಸಿ, ತಪಾಸಿಸಲು ಅನುಕೂಲವಾಗಿದೆ.

2026 ರ ಪ್ರಾರಂಭದಲ್ಲಿ ಒಂದು ದೇಶ – ಒಂದು ದಾಖಲೆಯಂತೆ ದೇಶದ 25 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಳವಡಿಸಲಾ–ಗಿದೆ. ರಾಷ್ಟ್ರೀಯ ಪಾಸ್ ಪದ್ಧತಿಯಿಂದ ದೇಶದಲ್ಲಿ ಮರಮುಟ್ಟು, ಬಿದಿರು, ಅರಣ್ಯದ ಕಿರು ಉತ್ಪನ್ನಗಳ ಸಾಗಾಣಿಕೆಯನ್ನು ವ್ಯವಸ್ಥಿತಗೊಳಿಸಲಾಗಿದೆ. ಇದರಿಂದ ರಾಜ್ಯಗಳಲ್ಲಿದ್ದಂತಹ ಪ್ರತ್ಯೇಕ ಪೋರ್ಟಲ್ ಆಧಾರಿತ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದ್ದು, ಬದಲಿಗೆ ಒಂದೇ ಮಾದರಿಯ ಡಿಜಿಟಲ್ ಪೋರ್ಟಲ್ ನೊಂದಿಗೆ ಸಂಯೋಜಿಸಲಾಗಿದೆ. ಈಗಾಗಲೇ ಈ ಪದ್ಧತಿಯನ್ನು ರಾಜ್ಯಗಳಾದ ಮಧ್ಯಪ್ರದೇಶ, ಜಾರ್ಖಂಡ್, ಬಿಹಾರ, ಛತ್ತೀಸ್‌ಗಡ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ತ್ರಿಪುರ, ಜಮ್ಮು–ಕಾಶ್ಮೀರ ಮತ್ತು ಗುಜರಾತ್‌ನಲ್ಲಿ ಜಾರಿಯಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಕ್ರಿಯೆಯು ಮ್ಯಾಪಿಂಗ್ ಹಂತದಲ್ಲಿದ್ದು, ಇನ್ನೂ ಜಾರಿಗೆ ತಂದಿರುವುದಿಲ್ಲ.

2. ರಾಷ್ಟ್ರೀಯ ಮರ–ಮುಟ್ಟು (ನಾಟ) ನಿರ್ವಹಣಾ ಪದ್ಧತಿ (NTMS – National Timber Management System):–

ಪ್ರಸ್ತುತ ಆನ್‌ಲೈನ್ ಪದ್ಧತಿಗೆ ರೈತರುಗಳು ಎಲ್ಲಾ ಮಾಹಿತಿಯೊಂದಿಗೆ ನೋಂದಾಯಿಸಿಕೊಳ್ಳಬೇಕಿದೆ. ಅಂದರೆ ,

(ಅ) ನೆಡುತೋಪುಗಳ ವಿವರ

(ಬಿ) ಫೋಟೋ ದೊಂದಿಗೆ ಭೌಗೋಳಿಕ ಪ್ರದೇಶದ ವಿವರ

(ಸಿ) ಬೆಳೆದಿರುವ ಮರಗಳ ಜಾತಿಯ ವಿವರ ಮತ್ತು

(ಡಿ) ಮಾಲೀಕತ್ವ ದೃಢಪಡಿಸುವ ಮತ್ತು ನಾಟಿ ಮಾಡಿರುವ ಮರಗಳ ವಿವರ.

ಇದರೊಂದಿಗೆ ಮರಗಳ ವಿಲೇವಾರಿ (ಕೊಯ್ಲಿನ) ನಿಟ್ಟಿನಲ್ಲಿ ಕೋರಿಕೆ ಪತ್ರ, ಮತ್ತು ಸಾಗಾಣಿಕೆ ಪಾಸ್‌ಗಳನ್ನು ಕೋರುವ ಪತ್ರ.

ವಿಲೇವಾರಿಗೆ 10 ಮರಗಳಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದರೆ NTMS ಪೋರ್ಟಲ್‌ನಲ್ಲಿ ಸ್ವತಃ ತಕ್ಷಣದಲ್ಲಿಯೇ ಯಾವುದೇ ಅಭ್ಯಂತರವಿಲ್ಲವೆಂದು ಘೋಷಿಸುವುದು ಮತ್ತು ಫೋಟೋಗಳ ಆಧಾರದಲ್ಲಿಯೇ ಮರಗಳ ದಪ್ಪವನ್ನು ಅಂದಾಜಿಸಲು, ತಪಾಸಿಸಲು ಮತ್ತು ನ್ಯಾಯಯುತ ಬೇಡಿಕೆಗೆ ಪ್ರಮಾಣ ಪತ್ರ ನೀಡಲಾಗುವುದು. ಆದರೆ ಯಾವುದೇ ಮರಗಳನ್ನು ಕಡಿಯುವ ಪೂರ್ವದಲ್ಲಿ ಅರ್ಜಿಯನ್ನು ಅಧಿಕೃತವಾಗಿ ಸಲ್ಲಿಸಬೇಕು ಹಾಗೂ ಕಡಿಯುವ ಪೂರ್ವದಲ್ಲಿಯೇ ಮರಗಳ ಛಾಯಾಚಿತ್ರವನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು, ಹಾಗೂ ತೋಟದ / ಕಡಿತದ ದಿನಾಂಕವನ್ನು ನಮೂದಿಸಬೇಕು. ಕೊಯ್ಲಿನ ನಂತರ ಬುಡಭಾಗಗಳ ಛಾಯಾಚಿತ್ರವನ್ನು ಆಧಾರವಾಗಿ ಸಲ್ಲಿಸಬೇಕು, ಪರಿಶೀಲನೆಯಲ್ಲಿರುವ ಸಕ್ಷಮ ಪ್ರಾಧಿಕಾರವು ಅಥವಾ ಇದಕ್ಕಾಗಿ ಇರುವ ಅಧಿಕಾರಿಗಳು ನಂತರ ತಪಾಸಣೆ ನಡೆಸಿ ಪಾಸ್‌ಗಳನ್ನು ವಿತರಿಸಬೇಕು. ಇದೊಂದು ನಿಖರವಾದ ಮತ್ತು ಅತ್ಯುತ್ತಮವಾದ ನಿಯಂತ್ರಣಕ್ಕಾಗಿರುವ ಡಿಜಿಟಲೀಕರಣದ ಪ್ರಕ್ರಿಯೆಯಾಗಿದ್ದು, ಇದರಿಂದ ಅಕ್ರಮ ಕಡಿತವನ್ನು ಹಾಗೂ ಸಾಗಾಣಿಕೆಯನ್ನು ಹತೋಟಿಗೆ ತರಲು ಸಾಧ್ಯವಾಗಿದೆ.

ಪ್ರಸ್ತುತದಲ್ಲಿ NTMS ಪದ್ಧತಿಯು ಕರ್ನಾಟಕದಲ್ಲಿ ಜಾರಿಯಲ್ಲಿರುವುದಿಲ್ಲ, ಹಾಗೂ ಮರಗಳ ಕಡಿತಲೆಗೆ ಅಸ್ತಿತ್ವದಲ್ಲಿರುವ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976 ರಂತೆ ಅನುಮತಿ ಪಡೆಯಬೇಕಿದೆ.

3. ಭಾರತೀಯ ಅರಣ್ಯ ಮತ್ತು ಮರ–ಮುಟ್ಟು ಪ್ರಮಾಣೀಕರಣದ ಯೋಜನೆ (IFWCS – Indian Forest and Wood Certification Scheme):–

ಈ ಯೋಜನೆಯನ್ನು ಡಿಸೆಂಬರ್ 2023 ರಲ್ಲಿ ಪ್ರಾರಂಭಿಸಲಾಗಿದೆ, ಈ ಯೋಜನೆಯು ಭಾರತದ ಆಂತರಿಕ ಮರ–ಮುಟ್ಟಿನ ಉತ್ಪಾದನೆಯ ಗುಣಮಟ್ಟವನ್ನು ವಿಶ್ವದ ಗುಣಮಟ್ಟಕ್ಕೆ ತರುವುದಾಗಿದೆ. ಭಾರತದ ಉತ್ಪನ್ನಗಳಿಗೆ ಅನುಕೂಲವಾಗುವಂತೆ ಯೂರೋಪಿಯನ್ ಯೂನಿಯನ್‌ನ ನಿರ್ವನೀಕರಣ ನಿಯಂತ್ರಣದಲ್ಲಿರುವ ಅಂಶಗಳನ್ನು ಪಡೆಯಲಾಗುವುದು. ಈ ತರಹದ ಮೂರನೇ ಮಧ್ಯಸ್ಥಗಾರ ಯೋಜನೆಯು ಕೃಷಿ ಅರಣ್ಯದ ಪ್ರೋತ್ಸಾಹಕ್ಕಾಗಿ ಉತ್ತಮ ಉತ್ತಮ ಮಾರುಕಟ್ಟೆಯನ್ನು ಉತ್ತೇಜಿಸಲು ಮತ್ತು ಜವಾಬ್ದಾರಿಯುತ ಗುಣಮಟ್ಟದ ಮರ–ಮುಟ್ಟನ್ನು ಪಡೆಯಲು ಇರುವ ಪದ್ಧತಿಯಾಗಿದೆ. ಭಾರತೀಯ ಅರಣ್ಯ ಸಂಸ್ಥೆ, ಭೋಪಾಲ್ (IIFM) ನು ಈ ಯೋಜನೆಯ ಅನುಷ್ಠಾನಗೊಳಿಸಲು ಮತ್ತು ಯೋಜನೆಯ ಮೇಲ್ವಿಚಾರಣೆಹೊಣೆಯನ್ನು ಭಾರತದ ಅರಣ್ಯ ಮತ್ತು ಮರ–ಮುಟ್ಟು ಪ್ರಮಾಣೀಕರಣ ಪರಿಷತ್ ಹೊಂದಿರುತ್ತದೆ.

4. ಮರಗಳ ವಿಲೇವಾರಿ (ಕಡಿತಲೆ)ಗಾಗಿ ಇರುವ ಮಾದರಿ ನಿಯಮಗಳು – Model Rules for Tree Felling:

2025–26 ರಲ್ಲಿ MOEF & CC ಯ ಮಾರ್ಗದರ್ಶಕತ್ವದಡಿ ಮಂತ್ರಾಲಯದಿಂದ ಕೃಷಿ ಭೂಮಿಯಲ್ಲಿನ ಮರಗಳ ವಿಲೇವಾರಿಗೆ ಮಾದರಿ ನಿಯಮಗಳನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯನ್ವಯ ಮರಗಳ ಕೊಯ್ಲಿನಿಂದ ರೈತರ ಆದಾಯವನ್ನು ಯಾವ ರೀತಿಯಲ್ಲಿ ಹೆಚ್ಚಿಸಲು ಸಾಧ್ಯವೆಂದು ತಿಳಿದು ಪರಿಚಯಿಸಲಾಗಿದೆ. ವಿಶ್ವದಾದ್ಯಂತ ಶೇ.43 ಕ್ಕಿಂತ ಹೆಚ್ಚಿನ ಕೃಷಿ ಭೂಮಿಯಲ್ಲಿ ಕೃಷಿಅರಣ್ಯವನ್ನು ಬೆಳೆಯಲಾಗುತ್ತಿದೆ. ಆದರೆ ಈ ಮಾದರಿ ನಿಯಮಗಳು ಕೆಳಗಾಣಿಸಿರುವ ಸಂದರ್ಭಗಳಲ್ಲಿ ಅನ್ವಯಿಸುವುದಿಲ್ಲ.

(1) ಮರಗಳ ಮಾರಾಟಕ್ಕಿರುವ ಮಾರುಕಟ್ಟೆಯು ಬೆಲೆಯನ್ನು ಖಾತ್ರಿಪಡಿಸುವುದಿಲ್ಲ. – ಇಲ್ಲಿ ರೈತರು, ಮರದ ಉದ್ಯಮಿಗಳು ಮತ್ತು ಬ್ಯಾಂಕ್‌ನ ಮಧ್ಯೆ ಯಾವುದೇ ತರಹದ ಸಹಕಾರ ಇರುವುದಿಲ್ಲ.

(2) ಬೆಳೆದು ನಿಂತಿರುವ ಮರಗಳನ್ನು ಅಡಮಾನ ಇಟ್ಟು ಸಾಲಪಡೆಯಲು ಬರುವುದಿಲ್ಲ.

(3) ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಯಾವುದೇ ರೀತಿಯ ನೆರವಾಗುವುದಿಲ್ಲ.

(4) ಪಾರದರ್ಶಕವಾದ ಮಾರುಕಟ್ಟೆ, ಮುಂದೇ ಆಗಬಹುದಾದ ಬೆಲೆ ನಿರ್ಧರಿಸಲು ಯಾವುದೇ ರೀತಿಯಲ್ಲಿ ಕರಾರಿರುವುದಿಲ್ಲ.

(5) ಇಲ್ಲಿನ ಹೆಚ್ಚಿನ ಅಧಿಕಾರವು ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟ ಸಮಿತಿಗಳಿರುವುದರಿಂದ, ಅವುಗಳೇ ತಪಾಸಿಸಲು, ಏಜೆನ್ಸಿಗಳನ್ನು ನೇಮಿಸಲು ಮತ್ತು ಯಾವ ಜಾತಿಯ ಮರಗಳನ್ನು ಬೆಳೆಯಬೇಕೆನ್ನುವ ಪಟ್ಟಿಯನ್ನು ನೀಡುತ್ತವೆ.

(6) ಅಂತರರಾಷ್ಟ್ರೀಯ ನಿಯಮಗಳನುಸಾರ ಪೂರೈಕೆ ಸರಪಳಿಯ ಪಾತ್ರ ಹೆಚ್ಚುವುದನ್ನು ಕಡ್ಡಾಯಗೊಳಿಸುವುದಿಲ್ಲ. ಉದಾ: ಯೂರೋಪಿಯನ್ ಯೂನಿಯನ್‌ನ ನಿರ್ವನೀಕರಣ ಶ್ರೇಣಿಗಳು ಅವಶ್ಯಕತೆಯಿರುವುದಿಲ್ಲ, ನಮಗೆ ಅವಶ್ಯಕತೆಯಿದ್ದಲ್ಲಿ ಬಳಸಿಕೊಳ್ಳಬಹುದು.

ಆದುದರಿಂದ ಈ ನಿಯಮಗಳು ಇ–ಮಾರ್ಕೆಟ್ ಪ್ಲ್ಯಾಟ್‌ಫಾರ್ಮ್, ಬೆಲೆಗಳ ಮಾಹಿತಿ, ಕೈಗಾರಿಕೆಗಳೊಂದಿಗೆ ಮಾಡಿಕೊಳ್ಳಬೇಕಾದ ಸಮಯಾನುಸಾರ, ಪ್ರಮಾಣ ಪತ್ರ ಪಡೆಯುವುದಕ್ಕೆ ರೈತರಿಗೆ ವಿವೇಚನೆ ನೀಡುವ ಬಗ್ಗೆ, ಮಂಜೂರಾತಿ ಪಡೆಯುವುದನ್ನು ಜಾರಿಗೆ ತರಬೇಕಿದೆ. ಈ ನಿಯಮಗಳನ್ವಯ ಪೋಷಿಸಲ್ಪಟ್ಟ ಮರಗಳ ಜಾತಿಗೆ ಮಾತ್ರ ಅನ್ವಯಿಸುವುದು. ಉಳಿದಂತೆ ಎಲ್ಲಾ ಜಾತಿಯ ಮರಗಳನ್ನು ಕೃಷಿ / ತೋಟಗಾರಿಕೆ ಬೆಳೆಗಳಿಗೆ ಅನ್ವಯಿಸುವ ನಿಯಮಗಳನ್ನು ಅನುಸರಿಸತಕ್ಕದ್ದು.

ಕರ್ನಾಟಕ ಅರಣ್ಯ ಇಲಾಖೆಯು ಈ ಮೇಲಿನ ಯೋಜನೆ ಜಾರಿಗೊಳಿಸುವ ಮುನ್ನ ಕರ್ನಾಟಕ ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವಲ್ಲಿ ಶ್ರಮವಹಿಸುತ್ತಿದೆ.

5. ತಾಂತ್ರಿಕತೆ ಮತ್ತು ಡಿಜಿಟಲ್ ತಂತ್ರಜ್ಞಾನ ಬೆಳವಣಿಗೆ:

ನೀತಿ ಆಯೋಗ ಹೊರತಂದಿರುವ "ಗ್ರೋ ಪೋರ್ಟಲ್" ದೇಶದ ಹಸಿರೀಕರಣ ಮತ್ತು ಬಂಜರು ಭೂಮಿ ಸಂರಕ್ಷಣೆಗಾಗಿ ಇರುವ (GIS–Geographic Information System) ಭೌಗೇಳಿಕ ಮಾಹಿತಿ ವ್ಯವಸ್ಥೆ ಮತ್ತು RS ಮ್ಯಾಪಗಳ ಬಳಕೆಯನ್ನು ತಿಳಿಸುತ್ತದೆ. ಇವುಗಳನ್ನು ಸದ್ಯದಲ್ಲಿ ಕೃಷಿ ಕ್ಷೇತ್ರದ ಅಳುವಳಿತೆಗಾಗಿ ಮತ್ತು ಜಾತಿಗಳ ಆಯ್ಕೆ ಮತ್ತು ಸ್ಯಾಟಲೈಟ್ ಆಧಾರಿತ ಕೃಷಿ ಅರಣ್ಯಗಳ ಹೊಂದಾಣಿಕೆಯನ್ನು ಜಿಲ್ಲಾ ಮಟ್ಟದಲ್ಲಿ ಮಾರ್ಗದರ್ಶನ ನೀಡಲು ಬಳಸಲಾಗುತ್ತಿದೆ.

ಡಿಜಿಟಲ್ ತಂತ್ರಜ್ಞಾನವನ್ನು ಕೃಷಿ ಜಮೀನುಗಳಲ್ಲಿ ಬೆಳೆಯಲಾಗುವ ಮರಗಳ ಸೂಕ್ತ ವಿಲೇವಾರಿಗೆ / ಸಾಗಾಣಿಕೆಗೆ, ಪ್ರಮಾಣೀಕರಿಸುವ ಸಂದರ್ಭಗಳಲ್ಲಿ ಪಾರದರ್ಶಕತೆಯನ್ನು ಬೆಳೆಗಾರರೊಂದಿಗೆ ತಂದಿರುವ "ರೈತ ಸ್ನೇಹಿ" ಯೋಜನೆಯಾಗಿದೆ. ಈ ತಂತ್ರಜ್ಞಾನವನ್ನು ರೈತರು ಸರಳ ರೀತಿಯಲ್ಲಿ ಬಳಸಲು ಶ್ರಮವಹಿಸಬೇಕಿದೆ.

ಲೇಖಕರ ಸಂಪರ್ಕಕ್ಕಾಗಿ: +919449863876

ಮರದ ರೆಂಬೆ ಕೊಂಬೆ ಕತ್ತರಿಸುವಿಕೆ (Pruning)

ಲೇಖಕರು: ಡಾ. ಆರ್. ಸುಂದರರಾಜ್.
ಅನುವಾದ: ಡಾ: ಎಸ್.ರಮೇಶ್.





ಮರದ ರೆಂಬೆ ಕೊಂಬೆ ಕತ್ತರಿಸುವಿಕೆ (Pruning) ಎಂದರೇ , ಕೀಟಗಳು, ರೋಗಗಳು ಅಥವಾ ಸೂರ್ಯನ ಬೆಳಕಿನ ಕೊರತೆಯಿಂದ ಒಣಗುತ್ತಿರುವ ಅಥವಾ ಸಾಯುತ್ತಿರುವ ಮರ/ಪೊದೆಯ ನಿರ್ದಿಷ್ಟ ಭಾಗಗಳನ್ನು ತೆಗೆದುಹಾ–ಕುವ ಪ್ರಕ್ರಿಯೆಗೆ ಕತ್ತರಿಸುವಿಕೆ ಎನ್ನುತ್ತಾರೆ. ಸಾರ್ವಜನಿಕ ಉದ್ಯಾನ ಮತ್ತು ಉದ್ಯಾನವನಗಳಲ್ಲಿ ಮರಗಳ ಆಕಾರವನ್ನು ನಿಯಂತ್ರಿಸಲು ಮತ್ತು ರಚನಾತ್ಮಕ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಕತ್ತರಿಸಲಾಗುತ್ತದೆ, ಇದರಿಂದ ಸೌಂದರ್ಯ ಹೆಚ್ಚಾಗುತ್ತದೆ. ಅಲ್ಪಾವಧಿಯಲ್ಲಿ ಎಲೆಗಳು, ಹೂವುಗಳು ಮತ್ತು ಹಣ್ಣುಗಳ ಇಳುವರಿಯನ್ನು ಹೆಚ್ಚಿಸಲು ಕತ್ತರಿಸುವುದು ಅತ್ಯಗತ್ಯ ಮತ್ತು ಆರ್ಥಿಕವಾಗಿದೆ ಎಂದು ಸಹ ಶಿಫಾರಸು ಮಾಡಲಾಗಿದೆ. ಕತ್ತರಿಸುವುದರಿಂದ ಕೊಂಬೆಗಳ ಎತ್ತರವನ್ನು ಮಿತಿಗೊಳಿಸುವುದರಿಂದ ಅಂತಹ ಮರಗಳ ಎಲೆಗಳು, ಹೂವು–ಗಳು, ಹಣ್ಣುಗಳನ್ನು ಕೀಳಲು ಸುಲಬವಾಗುತ್ತದೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಆದರೆ ಈ ಪ್ರಯೋಜನಗಳು ಮರದ ದೀರ್ಘಕಾಲೀನ ಆರೋಗ್ಯ ಮತ್ತು ಜೀವಿತಾವಧಿಯ ಮೇಲೆ ಪ್ರಭಾವ ಬೀರುತ್ತದೆ. ಉದಾಹರಣೆಗೆ, ಹಿಪ್ಪನೇರಳೆ/ಮಲ್ಬರಿ (ಚಿತ್ರ 1), ನುಗ್ಗೆ (ಚಿತ್ರ 2) ಮತ್ತು ಮಾವು (ಚಿತ್ರ 3) ಮರಗಳನ್ನು ಕತ್ತರಿಸದಿದ್ದರೆ ಅವು ದೊಡ್ಡ ಮರಗಳಾಗಿ ಬೆಳೆದು ಶಾಶ್ವತವಾಗಿ ಬದುಕುವುದನ್ನು ನಾವು ನೋಡಿರುತ್ತೇವೆ.

ಅಧಿಕ ಮೌಲ್ಯದ ತೇಗದ ಮರಗಳಲ್ಲಿ ಕತ್ತರಿಸುವಿಕೆ = ವಿನಾಶದ ತತ್ವಹೆಚ್ಚಿನ ಮರಗಳ ಜಾತಿಗಳು, ವಿಶೇಷವಾಗಿ ಮರದ ಇಳುವರಿ ನೀಡುವ ಜಾತಿಗಳು, ತಮ್ಮ ನೈಸರ್ಗಿಕ ಜೈವಿಕ ಪ್ರಕ್ರಿಯೆಯ ಭಾಗವಾಗಿ ಸ್ವಯಂ–ಕತ್ತರಿಸುವಿಕೆಯನ್ನು (Self pruning) ಮಾಡಿಕೊಳ್ಳುತ್ತವೆ. ಈ ಸತ್ಯವನ್ನು ಅರಿಯದ ಹಾಗೂ ಮಾಹಿತಿ ಕೊರತೆಯಿಂದ ,ರೈತರು ಮತ್ತು ತೇಗ ಬೆಳೆಗಾರರು ತೋಟಗಾ–ರಿಕಾ ಬೆಳೆಗಳಲ್ಲಿ ಅನುಸರಿಸುವ ಅದೇ ಕತ್ತರಿಸುವ ತರ್ಕವನ್ನು ಶ್ರೀಗಂದ/ ಚಂದನ ಮತ್ತು ತೇಗದಂತಹ ಅಮೂಲ್ಯ ನಾಟಾ ಆಗುವಂತಹ ಮರಗಳಿಗೆ ಪಾಲಿಸುವುದರಿಂದ ನಾಟಾ (Timber) ಇಳುವರಿ ನೀಡುವ ಮರಗಳಲ್ಲಿ ಕತ್ತರಿಸುವಿಕೆಯ ಪ್ರತಿಕೂಲ ಪರಿಣಾಮಗಳು ತಕ್ಷಣದ ಸಾವಿನಿಂದ ಹಿಡಿದು ಆರೋಗ್ಯ ಮತ್ತು ಬೆಳವಣಿಗೆಯ ಕುಸಿತದವರೆಗೆ ಇರುತ್ತವೆ. ಇದರಿಂದ ರಚನಾತ್ಮಕ ದುರ್ಬಲತೆ, ಕುಳ್ಳ ಬೆಳವಣಿಗೆ, ಕೊಳೆತ ಶಿಲೀಂಧ್ರ ಮತ್ತು ಮರವನ್ನು ಹಾಳು ಮಾಡುವ ಕೀಟಗಳನ್ನು ಆಹ್ವಾನಿಸುವ ತೆರೆದ ಗಾಯಗ–ಳು ಉಂಟಾಗುತ್ತವೆ. ಇದರಿಂದ ಪ್ರಮುಖ ಹೂ ಮತ್ತು ಎಲೆ ಮೊಗ್ಗುಗಳು ಬರುವುದಿಲ್ಲ, ಮರದ ಚೈತನ್ಯವನ್ನು ಕಡಿಮೆ ಮಾಡುತ್ತದೆ, ಸ್ಥಿರತೆಗೆ ಧಕ್ಕೆ ತರುತ್ತದೆ ಮತ್ತು ಸೌಂದರ್ಯದ ಮೌಲ್ಯ ಹಾಗೂ ಪರಿಸರ ಸೇವೆಗಳನ್ನು ಕಡಿಮೆ ಮಾಡುತ್ತದೆ. ಬೆಳೆಗಾರರು ಕತ್ತರಿಸುವಿಕೆ (Pruning) ಯನ್ನು ಅನು–ಸರಿಸಲು ಕಾರಣವೆಂದರೆ ಮಾಹಿತಿ ಕೊರತೆ ಹಾಗು ಪ್ರಾಧ್ಯಾಪಕರು ಮತ್ತು ವಿಜ್ಞಾನಿಗಳ ತಪ್ಪು ಮಾರ್ಗದರ್ಶನ. ಇಲ್ಲಿಯವರೆಗೆ ಮರದ ಇಳುವರಿ ನೀಡುವ ಮರಗಳಲ್ಲಿ ಕತ್ತರಿಸುವಿಕೆಯ ಪ್ರಯೋಜನಗಳನ್ನು ತೋರಿಸುವ ಯಾವುದೇ ಅಧಿಕೃತ ವೈಜ್ಞಾನಿಕ ಪುರಾವೆಗಳಿಲ್ಲ. ಆದರೆ ಕತ್ತರಿಸುವಿಕೆಯು ಮರಗಳ ತಕ್ಷಣದ ಸಾವಿಗೆ ಮಾತ್ರವಲ್ಲದೆ, ಮರಗಳ ಆರೋಗ್ಯವನ್ನು ಹಾಳು ಮಾಡುತ್ತದೆ ಕತ್ತರಿಸಿದ ತುದಿಗಳ ಮೂಲಕ ಮರದ ಕೊಳೆತ ರೋಗಕಾರಕಗಳು ಮತ್ತು ಮರ ತಿನ್ನುವ ಕೀಟಗಳಿಗೆ ಸುಲಭ ಪ್ರವೇಶವನ್ನು ನೀಡುತ್ತದೆ, ಆಂತರಿಕ ಕೊಳೆತಕ್ಕೆ ಕಾರಣವಾಗುತ್ತದೆ, ಕಾಂಡವನ್ನು ಟೊಳ್ಳಾಗಿಸುತ್ತದೆ ಮತ್ತು ಮಳೆನೀರು ಒಳಗೆ ಹೋಗಲು ಅವಕಾಶ ನೀಡುತ್ತದೆ. ಇದರಿಂದ ತೀವ್ರ ಕೊಳೆತ ಉಂಟಾಗಿ ಚೇಗು/ ಗಟ್ಟಿಯಾದ ಮರದ (Heartwood) ದೊಡ್ಡ ನಷ್ಟವಾಗುತ್ತದೆ (ಚಿತ್ರಗಳು 4, 5, 6 ಮತ್ತು 7).

ತೊಗಟೆಯು ಮರದ ಮೊದಲ ರಕ್ಷಣಾ ಪದರವಾಗಿ ಕಾರ್ಯನಿರ್ವಹಿಸುತ್ತದೆ, ಒಳಗಿನ ಕಾಂಡದ ಪದರಗಳನ್ನು ರಕ್ಷಿಸುತ್ತದೆ ಅಂದರೆ ತೊಗಟೆಯ ಕೆಳ–ಗಿರುವ ಬಿಳಿ ಪಟ್ಟಿಯಂತಹ ಮೃದುಮರ ಪದರ (Sapwood) ಮತ್ತು ಮಧ್ಯದಲ್ಲಿರುವ ಚೇಗು ಮರ (Heartwood). ಕೊಂಬೆಗಳನ್ನು ಕತ್ತರಿಸಿದಾಗ ಈ ರಕ್ಷಣಾ ಪದರಕ್ಕೆ ಗಾಯವಾಗುತ್ತದೆ ಮತ್ತು ಒಣಗುತ್ತದೆ, ಇದರಿಂದ ಒಳಗಿನ ಅಂಗಾಂಶಗಳು ತೆರೆದುಕೊಳ್ಳುತ್ತವೆ. ಈ ತೆರೆದ ಗಾಯಗಳು ಮರದ ಕೊಳೆತ ಶಿಲೀಂಧ್ರಗಳು ಮತ್ತು ಮರ ಕೊರೆಯುವ ಹುಳುಗಳು ಮತ್ತು ಗೆದ್ದಲುಗಳಂತಹ ಜೈವಿಕ ಹಾನಿಕಾರಕ ಜೀವಿಗಳಿಗೆ ಸುಲಭ ಪ್ರವೇಶದ್ವಾರವಾಗುತ್ತವೆ. ಒಮ್ಮೆ ಶಿಲೀಂಧ್ರ ಮತ್ತು ಕೀಟಗಳ ಸೋಂಕು ಉಂಟಾದರೆ ಅದನ್ನು ನಿಯಂತ್ರಿಸುವುದು ಅತ್ಯಂತ ಕಷ್ಟ ಏಕೆಂದರೆ ಈ ಜೀವಿಗಳಲ್ಲಿ ಹಲವು ಕೀಟನಾಶಕಗಳಿಗೆ ಬಲವಾದ ಪ್ರತಿರೋಧವನ್ನು ಬೆಳೆಸಿಕೊಂಡಿವೆ.ಕತ್ತರಿಸುವಿಕೆಯಿಂದ ಉಂಟಾಗುವ ಗಾಯಗ–ಳು ನೈಸರ್ಗಿಕ ಕೊಂಬೆ ಬೆಳವಣಿಗೆಯ ಮಾದರಿಗಳನ್ನು ಅಡ್ಡಿಪಡಿಸುತ್ತವೆ, ಅಲ್ಲದೆ ಕಾಂಡದ ಮೇಲೆ ಅತಿಯಾದ ಗುಂಪಾಗುವಿಕೆಗೆ (Excessive branching) ಕಾರಣವಾಗುತ್ತದೆ. ರಚನಾತ್ಮಕ ಮತ್ತು ಶಾರೀರಿಕ ಪರಿಣಾಮಗಳ ಹೊರತಾಗಿ, ಕತ್ತರಿಸುವಿಕೆಯು ಹೂ ಮತ್ತು ಎಲೆ ಮೊಗ್ಗುಗಳ ಲಭ್ಯತೆಯನ್ನು ಕಡಿಮೆ ಮಾ–ಡುವ ಮೂಲಕ ಪರಿಸರ ಪರಸ್ಪರ ಕ್ರಿಯೆಗಳನ್ನು ಅಡ್ಡಿಪಡಿಸುತ್ತದೆ, ಪರಾಗಸ್ಪರ್ಶ ಮಾಡುವ ಕೀಟಗಳಿಗೆ ಅಗತ್ಯ ಸಂಪನ್ಮೂಲಗಳನ್ನು ಮಿತಿಗೊಳಿಸುತ್ತದೆ. ಇದು ಅವುಗಳ ಆಹಾರ ಸಂಗ್ರಹಣೆ, ಗೂಡು ಕಟ್ಟುವ ನಡವಳಿಕೆ, ಋತುಮಾನ ಮತ್ತು ಸಂತಾನೋತ್ಪತ್ತಿಯ ಮೇಲೆ ಪರಿಣಾಮ ಬೀರುತ್ತದೆ. ಅಂತಿಮವಾಗಿ ಶ್ರೀಗಂಧ/ ಚಂದನ ಮತ್ತು ತೇಗದಂತಹ ಅಡ್ಡ–ಪರಾಗಸ್ಪರ್ಶದ ಮರಗಳ ಜಾತಿಗಳಿಗೆ ಹಾನಿ ಮಾಡುತ್ತದೆ.

ವಿವರವಾದ ಸಮೀಕ್ಷೆಯು ಬಹಿರಂಗಪಡಿಸಿದ್ದೇನೆಂದರೆ, ಶ್ರೀಗಂಧ/ ಚಂದನ ಕೃಷಿ ನಿಯಮಗಳ ಸಡಿಲಿಕೆಯ ನಂತರ ಬೆಳೆದ ಹೆಚ್ಚಿನ ಶ್ರೀಗಂಧದ ಹಾಗೂ ತೇಗದ ನೆಡುತೋಪುಗಳ ವೈಫಲ್ಯಕ್ಕೆ ಮತ್ತು ಮತ್ತು ಚೇಗು/ಗಟ್ಟಿಯಾದ ಮರದ (Heartwood) ನಷ್ಟಕ್ಕೆ ಮುಖ್ಯ ಕಾರಣವೆಂದರೆ ಮರದ/ನಾಟಾ ಇಳುವರಿ ನೀಡುವ ಮರಗಳಲ್ಲಿ ಕತ್ತರಿಸುವಿಕೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಆಹಾರಕ್ಕಾಗಿ ಅಥವಾ ಮರಕ್ಕಾಗಿ ಮರವನ್ನು ಬೆಳೆಯುವ ಉದ್ದೇಶವನ್ನು ನಾವು ಪ್ರತ್ಯೇಕಿಸಬೇಕು. ಆಹಾರ ಪದಾರ್ಥಗಳನ್ನು ಪಡೆಯಲು ಕತ್ತರಿಸುವುದು ಅತ್ಯಗತ್ಯ ಮತ್ತು ಆರ್ಥಿಕವಾಗಿದ್ದರೆ, ಮರಕ್ಕಾಗಿ ಮರವನ್ನು ಬೆಳೆಸುವಾಗ ಕತ್ತರಿಸುವುದು ಅಪಾರ ನಷ್ಟವನ್ನು ಉಂಟುಮಾಡುತ್ತದೆ ಎಂಬುದು ಸಂಶೋಧನೆಗಳು ಬಲ–ವಾಗಿ ಒತ್ತಿಹೇಳುತ್ತವೆ.

"ದೀರ್ಘಾವಧಿ, ಅಧಿಕ ಮೌಲ್ಯದ ತೇಗದ ಮರಗಳಿಗೆ ಅನ್ವಯಿಸಿದಾಗ ಕರೆಯಲ್ಪಡುವ 'ಕತ್ತರಿಸುವಿಕೆಯ ವಿಜ್ಞಾನ'ವು 'ವಿನಾಶದ ತತ್ವ'ವಾಗುತ್ತದೆ."ಆದ್ದರಿಂದ, ದೀರ್ಘಾವಧಿ ತೇಗದ ಜಾತಿಗಳ ಬೆಳೆಗಾರ–ರು ಈ ತಪ್ಪಾದ ಅಭ್ಯಾಸವನ್ನು ತ್ಯಜಿಸಿ, ಬದಲಿಗೆ ನೈಸರ್ಗಿಕ, ಸುಸ್ಥಿರ ಬೆಳವಣಿಗೆ ವರ್ಧಿಸುವ ವಿಧಾನಗಳ ಮೂಲಕ ಮರದ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೇಲೆ ಗಮನಹರಿಸಬೇಕು. ಸ್ಪಷ್ಟ ವ್ಯತ್ಯಾಸವನ್ನು ಮಾಡಬೇಕು:ಆಹಾರಕ್ಕಾಗಿ ಬೆಳೆದ ಹಣ್ಣಿನ ಬೆಳೆಗಳನ್ನು ಕತ್ತರಿಸುವುದರಿಂದ ನಮಗೆ ಪ್ರಯೋಜನವಾಗುತ್ತದೆ. ಮರಕ್ಕಾಗಿ ಬೆಳೆದ ತೇಗದ ಮರಗಳನ್ನು ಕತ್ತರಿಸುವುದರಿಂದ ನಾವು ಮರಗಳನ್ನು ಮತ್ತು ಅವುಗಳ ಉತ್ಪಾದನೆಯನ್ನು ಕಳೆದುಕೊಳ್ಳುತ್ತೇವೆ. ಪ್ರತಿ ಎಲೆಯೂ ಅತ್ಯಗತ್ಯ – ಮರದ ಬೆಳವಣಿಗೆಗೆ ಮಾತ್ರವಲ್ಲದೆ, ಅದು ಒದಗಿಸುವ ಪರಿಸರ ಸೇವೆಗಳು ಸಹ ಮುಖ್ಯ. ಇತ್ತೀಚಿನ ಪ್ರಕೃತಿ ವಿಕೋಪಗಳು, ಎಲ್ ನಿನೊ, ಇತ್ಯಾದಿಗಳ ಹವಾಮಾನ ಬದಲಾವಣೆಯ ಯುಗದಲ್ಲಿ ತುರ್ತಾಗಿ ಎಲ್ಲರೂ ಯೋಚಿಸಬೇಕಾಗಿರುವುದು "ದೀರ್ಘಬಾಳಿಕೆ ಬರುವ, ದೀರ್ಘಾವಧಿ ತೇಗದ ಮರಗಳನ್ನು ಕತ್ತರಿಸುವುದರಿಂದ ರಕ್ಷಿಸುವುದು, ಮರವನ್ನು ಬೆಳೆಸುವುದು ಮತ್ತು ಮುಂದಿನ ಪೀಳಿಗೆಗಾಗಿ ಮರ ಆಧಾರಿತ ಪರಿಸರ ವ್ಯವಸ್ಥೆಗಳನ್ನು ಸಂರಕ್ಷಿಸುವುದು ಅತ್ಯಗತ್ಯ. ಮರದ ಆರೋಗ್ಯ, ಬೆಳೆ–ಗಾರರ ಲಾಭ ಮತ್ತು ಪರಿಸರ ವ್ಯವಸ್ಥೆಯ ಸ್ಥಿತಿಸ್ಥಾಪಕತ್ವವನ್ನು ರಕ್ಷಿಸಲು ಸುಸ್ಥಿರ, ಕತ್ತರಿಸದ ಅಭ್ಯಾಸಗಳು ಅತ್ಯಗತ್ಯ.



A B C

ಚಿತ್ರ 1. ಹಿಪ್ಪು ನೇರಳೆ/ಮಲ್ಬೆರಿ A. ಕತ್ತರಿಸಿದ ಹಿಪ್ಪು ನೇರಳೆ/ಮಲ್ಬೆರಿ ಮರದಿಂದ ಎಲೆಗಳನ್ನು ಕೀಳುವುದು B. ಕತ್ತರಿಸಿದ ಹಿಪ್ಪು ನೇರಳೆ/ಮಲ್ಬೆರಿ ಮರ C. ಕತ್ತರಿಸದೇ ದೊಡ್ಡ ಮರವಾಗಿ ಬೆಳೆದ ಹಿಪ್ಪು ನೇರಳೆ/ಮಲ್ಬೆರಿ



A B C

ಚಿತ್ರ 2. ನುಗ್ಗೆ A. ನುಗ್ಗೆ ಮರದ ಎಲೆಗಳು, ಹೂವುಗಳು ಮತ್ತು ಕಾಯಿಗಳು B. ಕತ್ತರಿಸಿದ ನುಗ್ಗೆ ಮರ C. ಕತ್ತರಿಸದೇ ದೊಡ್ಡ ಮರವಾಗಿ ಬೆಳೆದ ನುಗ್ಗೆ ಮರ



A B C

ಚಿತ್ರ 3. ಮಾವಿನ ಮರ A. ಕಾಯಿ ಬಿಟ್ಟಿರುವ ಮಾವಿನ ಮರ B. ಕತ್ತರಿಸಿದ ಮಾವಿನ ಮರ C. ಕತ್ತರಿಸದೇ ದೊಡ್ಡ ಮರವಾಗಿ ಬೆಳೆದ ಮಾವಿನ ಮರ



ಚಿತ್ರ 4. ತೀವ್ರ ಕತ್ತರಿಸುವಿಕೆಯಿಂದಾಗಿ ಶ್ರೀಗಂದ ಮರಗಳ ಸಾವು



A B C



D

ಚಿತ್ರ 5. ಶ್ರೀಗಂಧದಲ್ಲಿ ಕತ್ತರಿಸುವಿಕೆಯ ಪರಿಣಾಮ A. ಕತ್ತರಿಸುವಿಕೆಯಿಂದ ಉಂಟಾದ ಕತ್ತರಿಸಿದ ಗಾಯ B ಮತ್ತು C. ಮರದ ಕೊಳೆತದ ಆರಂಭ D. ಕತ್ತರಿಸಿದ ಮರದಲ್ಲಿ ಚೇಗ /ಹೃದಯ (Heartwood) ಮರದ ಭಾರಿ ನಷ್ಟ



A B

ಚಿತ್ರ 6. ತೇಗದ ತೋಟಗಳು A. ಚಿಕ್ಕ ವಯಸ್ಸಿನ ತೋಟದಲ್ಲಿ ತೀವ್ರ ಕತ್ತರಿಸುವಿಕೆ B. ತೇಗದ ಬದು ತೋಟದಲ್ಲಿ ತೀವ್ರ ಕತ್ತರಿಸುವಿಕೆ



A B C

ಚಿತ್ರ 7. ತೇಗದ ಮರಗಳಲ್ಲಿ ಕತ್ತರಿಸುವಿಕೆ/ಗಾಯದ ಪರಿಣಾಮ A. ತೀವ್ರ ಕತ್ತರಿಸುವಿಕೆಯಿಂದಾಗಿ ಒಣಗುವುದು B. ಕತ್ತರಿಸಿದ ಸ್ಥಳಗಳಲ್ಲಿ ಅತಿಯಾದ ಗುಂಪುಗಾರಿಕೆ (Branching) C. ಹೃದಯ ಮರದ ನಷ್ಟಕ್ಕೆ ಕಾರಣವಾಗುವ ಕೊಳೆತದ ಆರಂಭ

ಡಾ. ಆರ್. ಸುಂದರರಾಜ್: ಮಾಜಿ ವಿಜ್ಞಾನಿ ಮತ್ತು ಮುಖ್ಯಸ್ಥರು, ಅರಣ್ಯ ಸಂರಕ್ಷಣಾ ವಿಭಾಗ, ICFRE–ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಮಲ್ಲೇಶ್ವರಂ, ಬೆಂಗಳೂರು. ಮೊ. ಸಂ.: 9945405396
ಡಾ. ಎಸ್.ರಮೇಶ್: ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕೃಷಿ ಅರಣ್ಯ ರೈತರ ಹಾಗೂ ತಂತ್ರಜ್ಞರು ಸಂಸ್ಥೆ, ವನವಿಕಾಸ, ಮಲ್ಲೇಶ್ವರಂ, ಬೆಂಗಳೂರು. ಮೊ. ಸಂ.: 9448076969s

ಕೃಷಿ–ಅರಣ್ಯ: ಮರಗಳೊಂದಿಗೇ ಕೃಷಿ ಅವಕಾಶಗಳಿದ್ದರೂ ಅಳವಡಿಕೆಯಲ್ಲಿ ಏಕೆ ಹಿಂಜರಿಕೆ?

ಲೇಖಕರು:



ಪಂಚಮಿ ಕೆ. ಹೆಚ್ – ವಿದ್ಯಾರ್ಥಿನಿ,

ಸಹಕಾರ:



ದೀಕ್ಷಾ – ವಿದ್ಯಾರ್ಥಿನಿ,



ಡಾ. ಬಿ. ತಾಂಬಟ್ – ಅರಣ್ಯ ಮತ್ತು ಪರಿಸರ ವಿಜ್ಞಾನ
ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ. ಆವರಣ, ಬೆಂಗಳೂರು.
ದೂರವಾಣಿ ಸಂಖ್ಯೆ: +91 9900544555

ಕೃಷಿಅರಣ್ಯ (Agroforestry) ಎಂಬುದು ಒಂದೇ ಭೂಮಿಯಲ್ಲಿ ಮರಗಳು, ಬೆಳೆಗಳು ಮತ್ತು ಅಗತ್ಯವಿದ್ದಲ್ಲಿ ಜಾನುವಾರುಗಳನ್ನು ಸಮನ್ವಯಗೊಳಿಸಿ ಬೆಳೆಸುವ ಕೃಷಿ ಪದ್ಧತಿಯಾಗಿದೆ. ಕೇವಲ ಒಂದು ಬೆಳೆ ಮೇಲೆ ಅವಲಂಬಿತರಾಗುವ ಬದಲು, ಮರ, ಬೆಳೆ, ಹಣ್ಣು, ಮೇವು ಹಾಗೂ ಜಾನುವಾರುಗಳಿಂದ ವಿವಿಧ ರೀತಿಯ ಉತ್ಪನ್ನಗಳನ್ನು ಪಡೆಯಲು ಇದು ಅವಕಾಶ ನೀಡುತ್ತದೆ. ಇದರಿಂದ ಮಣ್ಣಿನ ಫಲವತ್ತತೆ ಸುಧಾರಿಸುವುದು, ಮಣ್ಣಿನ ಸವಕಳಿ ಕಡಿಮೆಯಾಗುವುದು, ನೆರಳು ಒದಗುವುದು, ನೀರಿನ ಸಂರಕ್ಷಣೆ ಹಾಗೂ ಸ್ಥಳೀಯ ಜೀವವೈವಿಧ್ಯಕ್ಕೆ ಆಶ್ರಯ ದೊರೆಯುವುದು ಸೇರಿದಂತೆ ಹಲವು ಪರಿಸರ ಪ್ರಯೋಜನಗಳಿವೆ. ಹೀಗಾಗಿ ಕೃಷಿಅರಣ್ಯವು ಸಾಮಾನ್ಯ ಕೃಷಿ ಅಥವಾ ಪ್ರತ್ಯೇಕ ಅರಣ್ಯ ಪದ್ಧತಿಗಿಂತ ಭಿನ್ನವಾದ, ಕೃಷಿ ಮತ್ತು ಪರಿಸರದ ನಡುವೆ ಸಮತೋಲನ ಸಾಧಿಸುವ ವ್ಯವಸ್ಥೆಯಾಗಿದೆ.

ಕೃಷಿ ಮತ್ತು ಅರಣ್ಯದ ಸಮನ್ವಯವೇ ಕೃಷಿಅರಣ್ಯ ಪದ್ಧತಿ. ಇದನ್ನು ಸಾಮಾನ್ಯವಾಗಿ 'ಅಗ್ರೋಫಾರೆಸ್ಟ್ರಿ' ಎಂದು ಕರೆಯಲಾಗುತ್ತದೆ. ಇದು ಆಧುನಿಕ ಪರಿಕಲ್ಪನೆಯಂತೆ ಕಂಡರೂ, ಭಾರತೀಯ ರೈತರು ಶತಮಾನಗಳಿಂದಲೂ ಮರ ಆಧಾರಿತ ಕೃಷಿ ಪದ್ಧತಿಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಮನೆಯ ಸುತ್ತಮುತ್ತ, ಹೊಲದ ಗಡಿಗಳಲ್ಲಿ, ಜಾನುವಾರುಗಳಿರುವ ಪ್ರದೇಶಗಳಲ್ಲಿ ಹಾಗೂ ತೋಟಗಳಲ್ಲಿ ಸ್ಥಳೀಯ ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ವಿವಿಧ ಮರಗಳನ್ನು ಬೆಳೆಸುವುದು ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿತ್ತು. ಸಾಂಪ್ರದಾಯಿಕ ಮನೆ ತೋಟಗಳು, ಹುಲ್ಲುಗಾವಲು ವ್ಯವಸ್ಥೆಗಳು ಹಾಗೂ ಹೊಲದ ಗಡಿಗಳಲ್ಲಿ ಮರಗಳನ್ನು ಬೆಳೆಸುವ ಪದ್ಧತಿಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಇಂದಿನ ಆಧುನಿಕ ಕೃಷಿ–ಅರಣ್ಯ ಪದ್ಧತಿಯು ಈ ಸಾಂಪ್ರದಾಯಿಕವಾಗಿ ಜ್ಞಾನವನ್ನು ವೈಜ್ಞಾನಿಕ ನಿರ್ವಹಣೆ, ಉತ್ತಮ ನೆಡುವ ವಸ್ತುಗಳು ಮತ್ತು ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಸಂಯೋಜಿಸುವ ಪ್ರಯತ್ನವಾಗಿದೆ.

ಭಾರತದ ಹವಾಮಾನ ಮತ್ತು ಮಣ್ಣಿನ ವೈವಿಧ್ಯತೆಯಿಂದಾಗಿ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಕೃಷಿಅರಣ್ಯ ಪದ್ಧತಿಗಳು ಕಂಡುಬರುತ್ತವೆ. ಕೆಲವು ಪದ್ಧತಿಗಳಲ್ಲಿ ಬೆಳೆಗಳೊಂದಿಗೆ ಸಾಮಾನ್ಯ ಮರಗಳು ಅಥವಾ ಹಣ್ಣಿನ ಮರಗಳನ್ನು ಬೆಳೆಸಲಾಗುತ್ತದೆ. ಇನ್ನೂ ಕೆಲವು ಪದ್ಧತಿಗಳಲ್ಲಿ ಮರಗಳೊಂದಿಗೆ ಹುಲ್ಲು ಮತ್ತು ಜಾನುವಾರು ಸಾಕಣೆಯನ್ನು ಸಂಯೋಜಿಸಲಾಗುತ್ತದೆ. ಭೂಮಿಯ ಲಭ್ಯತೆ ಮತ್ತು ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಮರಗಳ ಸಾಲುಗಳ ನಡುವೆ ಬೆಳೆಗಳನ್ನು ಬೆಳೆಯುವುದು ಅಥವಾ ಹೊಲದ ಗಡಿಗಳಲ್ಲಿ ಮಾತ್ರ ಮರಗಳನ್ನು ನೆಡುವಂತಹ ವ್ಯವಸ್ಥೆಗಳನ್ನೂ ರೈತರು ಅನುಸರಿಸುತ್ತಾರೆ. ಆದ್ದರಿಂದ ಎಲ್ಲ ರೈತರಿಗೆ ಒಂದೇ ಮಾದರಿಯ ಕೃಷಿಅರಣ್ಯ ಪದ್ಧತಿ ಸೂಕ್ತವಾಗುವುದಿಲ್ಲ. ಸ್ಥಳೀಯ ಪರಿಸರ, ನೀರಿನ ಲಭ್ಯತೆ, ಮಾರುಕಟ್ಟೆ ಮತ್ತು ರೈತರ ಅಗತ್ಯಗಳಿಗೆ ಅನುಗುಣವಾಗಿ ಸೂಕ್ತ ವ್ಯವಸ್ಥೆಯನ್ನು ಆಯ್ಕೆ ಮಾಡುವುದು ಮುಖ್ಯ.

ಹವಾಮಾನ ಬದಲಾವಣೆ, ಮಣ್ಣಿನ ಸವಕಳಿ, ನೀರಿನ ಕೊರತೆ, ಜೀವವೈವಿಧ್ಯದ ನಷ್ಟ ಮತ್ತು ಕೃಷಿ ಭೂಮಿಯ ಮೇಲಿನ ಹೆಚ್ಚುತ್ತಿರುವ ಒತ್ತಡದ ಹಿನ್ನೆಲೆಯಲ್ಲಿ ಕೃಷಿ–ಅರಣ್ಯ ಪದ್ಧತಿಗೆ ಹೆಚ್ಚಿನ ಮಹತ್ವ ಬಂದಿದೆ. ಮರಗಳನ್ನು ಬೆಳೆಗಳೊಂದಿಗೆ ಸಂಯೋಜಿಸುವುದರಿಂದ ಕೃಷಿ ಆದಾಯದಲ್ಲಿ ವೈವಿಧ್ಯತೆ ತರಲು, ಮಣ್ಣಿನ ಆರೋಗ್ಯ ಸುಧಾರಿಸಲು, ನೀರನ್ನು ಸಂರಕ್ಷಿಸಲು, ಇಂಗಾಲವನ್ನು ಸಂಗ್ರಹಿಸಲು ಮತ್ತು ಜೀವವೈವಿಧ್ಯವನ್ನು ಬೆಂಬಲಿಸಲು ನೆರವಾಗುತ್ತದೆ. ಮರಗಳಿಂದ ಹಣ್ಣು, ಮೇವು, ಇಂಧನ, ಮರದ ಉತ್ಪನ್ನಗಳು ಮತ್ತು ಔಷಧೀಯ ವಸ್ತುಗಳಂತಹ ವಿವಿಧ ಉತ್ಪನ್ನಗಳೂ ದೊರೆಯುತ್ತವೆ. ಹೀಗಾಗಿ ಕೃಷಿ–ಅರಣ್ಯವು ಉತ್ಪಾದಕತೆ, ಆದಾಯದ ವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆಯನ್ನು ಒಂದೇ ವ್ಯವಸ್ಥೆಯಲ್ಲಿ ಒಗ್ಗೂಡಿಸುವ ಪ್ರಾಯೋಗಿಕ ವಿಧಾನವಾಗಿದೆ.

ಆದರೆ ಕೃಷಿಅರಣ್ಯದಿಂದ ಪ್ರಯೋಜನಗಳಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ರೈತರು ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ಇನ್ನೂ ಹಿಂಜರಿಯುತ್ತಿದ್ದಾರೆ. ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಚಿಕ್ಕಬಳ್ಳಾಪುರ ಜಿಲ್ಲೆಯ ಕೊಳವನಹಳ್ಳಿ ಗ್ರಾಮದಲ್ಲಿ ರೈತರೊಂದಿಗೆ ನಡೆಸಿದ ಸಮೀಕ್ಷೆಯನ್ನು ಆಧಾರವಾಗಿಸಿಕೊಂಡು, ಕೃಷಿಅರಣ್ಯವನ್ನು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ರೈತರು ಎದುರಿಸುವ ವಿವಿಧ ವಾಸ್ತವಿಕ ಸವಾಲುಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ರೈತರ ಅಭಿಪ್ರಾಯದಲ್ಲಿ ಕೃಷಿಅರಣ್ಯ ಪದ್ಧತಿಯ ಕುರಿತು ಸಮರ್ಪಕ ಮಾಹಿತಿ ಮತ್ತು ಮಾರ್ಗದರ್ಶನದ ಕೊರತೆ ಪ್ರಮುಖ ಸಮಸ್ಯೆಯಾಗಿದೆ. ಮರಗಳನ್ನು ನೆಡುವುದರಿಂದ ಭವಿಷ್ಯದಲ್ಲಿ ಉತ್ತಮ ಆದಾಯ ದೊರೆಯಬಹುದು ಎಂಬ ಅರಿವು ಇದ್ದರೂ, ಯಾವ ಮರವನ್ನು ಆಯ್ಕೆ ಮಾಡಬೇಕು, ಎಷ್ಟು ಅಂತರದಲ್ಲಿ ನೆಡಬೇಕು, ಯಾವ ಬೆಳೆಗಳೊಂದಿಗೆ ಸಂಯೋಜಿಸಬೇಕು, ಎಷ್ಟು ವರ್ಷ ನಿರ್ವಹಿಸಬೇಕು ಮತ್ತು ಉತ್ಪನ್ನಗಳನ್ನು ಎಲ್ಲಿ ಮಾರಾಟ ಮಾಡಬೇಕು ಎಂಬ ಕುರಿತು ಸ್ಪಷ್ಟ ಮಾಹಿತಿ ಎಲ್ಲ ರೈತರಿಗೆ ಲಭ್ಯವಿಲ್ಲ. ಕೆಲವು ರೈತರಿಗೆ ಮರಗಳನ್ನು ಬೆಳೆಸುವುದರಿಂದ ಕೋತಿ–ಗಳಂತಹ ವನ್ಯಜೀವಿಗಳ ಸಮಸ್ಯೆ ಹೆಚ್ಚಾಗಬಹುದು ಎಂಬ ಆತಂಕವೂ ಇದೆ.

ಸೀಮಿತ ಭೂಮಿ ಮತ್ತು ಪ್ರಾರಂಭಿಕ ಹೂಡಿಕೆ

ಭಾರತದ ಬಹುತೇಕ ರೈತರು ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿ ಹೊಂದಿರುವವರಾಗಿದ್ದಾರೆ. ಸೀಮಿತ ಭೂಮಿಯಲ್ಲಿ ಆಹಾರ ಬೆಳೆಗಳಿಂದಲೇ ತಕ್ಷಣದ ಆದಾಯ ಪಡೆಯಬೇಕಾದ ಪರಿಸ್ಥಿತಿಯಲ್ಲಿ, ದೀರ್ಘಕಾಲದ ನಂತರ ಆದಾಯ ನೀಡುವ ಮರಗಳಿಗೆ ಭೂಮಿಯ ಒಂದು ಭಾಗವನ್ನು ಮೀಸಲಿಡು–ವುದು ರೈತರಿಗೆ ಕಷ್ಟವಾಗುತ್ತದೆ. "ಜಮೀನಿನಲ್ಲಿ ಹೆಚ್ಚುವರಿ ಸ್ಥಳವೇ ಇಲ್ಲ" ಎಂಬ ಅಭಿಪ್ರಾಯವೂ ಕೃಷಿಅರಣ್ಯ ಅಳವಡಿಕೆಗೆ ಪ್ರಮುಖ ಅಡ್ಡಿಯಾಗಿದೆ.

ಪ್ರಾರಂಭಿಕ ಹೂಡಿಕೆಯೂ ಮತ್ತೊಂದು ಸಮಸ್ಯೆಯಾಗಿದೆ. ಶ್ರೀ ಮಂಜುನಾಥ್ ಅವರ ಅನುಭವ ಇದನ್ನು ಸ್ಪಷ್ಟಪಡಿಸುತ್ತದೆ. ಕೃಷಿಅರಣ್ಯ ಆರಂಭಿಸುವ ಸಂದರ್ಭದಲ್ಲಿ ಅವರು ಮಹಾಗನಿ ಸಸಿಗಳನ್ನು ಪ್ರತಿ ಸಸಿಗೆ ಸುಮಾರು ರೂ. 80ರಂತೆ ಖಾಸಗಿ ಮೂಲದಿಂದ ಖರೀದಿಸಿದ್ದರು. ಸ್ಥಳೀಯವಾಗಿ ಗುಣಮಟ್ಟದ ಸಸಿಗಳು ಸುಲಭವಾಗಿ ಲಭ್ಯವಿಲ್ಲದ ಕಾರಣ ಅವುಗಳನ್ನು ದೂರದ ಪ್ರದೇಶದಿಂದ ತರಿಸಬೇಕಾಯಿತು. ಸಸಿಗಳನ್ನು ಖರೀದಿಸುವುದರಿಂದ ಹಿಡಿದು ಸಾಗಣೆ ಮಾಡಿ ಹೊಲದಲ್ಲಿ ನೆಡುವವರೆಗೆ ಒಟ್ಟು ಸುಮಾರು ರೂ. 8,000 ವೆಚ್ಚವಾಗಿದೆ ಎಂದು ಅವರು ತಿಳಿಸಿದ್ದಾರೆ. ಮತ್ತೊಂದೆಡೆ, ರಕ್ತಚಂದನದ ಸಸಿಗಳನ್ನು ಅರಣ್ಯ ಇಲಾಖೆ–ಯಿಂದ ಪ್ರತಿ ಸಸಿಗೆ ಸುಮಾರು ರೂ. 5ರಂತೆ ಪಡೆದಿದ್ದರು. ಹೀಗಾಗಿ ಸಸಿಗಳ ಮೂಲ, ಸಾಗಣೆ ಮತ್ತು ನೆಡುವ ವಿಧಾನಕ್ಕೆ ಅನುಗುಣವಾಗಿ ಪ್ರಾರಂಭಿಕ ವೆಚ್ಚದಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬರುತ್ತದೆ. ಸ್ಥಳೀಯವಾಗಿ ಗುಣಮಟ್ಟದ ಸಸಿಗಳು ಮತ್ತು ವಿಶ್ವಾಸಾರ್ಹ ನರ್ಸರಿ ಮೂಲಗಳ ಮಾಹಿತಿ ದೊರೆತರೆ ಈ ಅನಗತ್ಯ ವೆಚ್ಚವನ್ನು ಕಡಿಮೆ ಮಾಡಬಹುದು.

ಮರ–ಬೆಳೆ ಸ್ಪರ್ಧೆ

ಮರ–ಬೆಳೆ ಸ್ಪರ್ಧೆಯು ಕೃಷಿಅರಣ್ಯದ ಪ್ರಮುಖ ತಾಂತ್ರಿಕ ಸವಾಲಾಗಿದೆ. ಮರಗಳು ಮಣ್ಣಿನಲ್ಲಿರುವ ನೀರು ಮತ್ತು ಪೋಷಕಾಂಶಗಳನ್ನು ಬಳಸುವುದರ ಜೊತೆಗೆ ನೆರಳಿನ ಮೂಲಕ ಬೆಳೆಗಳಿಗೆ ದೊರೆಯುವ ಬೆಳಕಿನ ಪ್ರಮಾಣವನ್ನೂ ಪ್ರಭಾವಿಸುತ್ತವೆ. ಆದ್ದರಿಂದ ಮರಗಳ ಸಾಂದ್ರತೆ, ಸಾಲುಗಳ ನಡುವಿನ ಅಂತರ, ಮರಗಳ ವಯಸ್ಸು ಮತ್ತು ಮಧ್ಯಂತರದಲ್ಲಿ ಬೆಳೆಯುವ ಬೆಳೆಗಳ ಆಯ್ಕೆಯನ್ನು ವೈಜ್ಞಾನಿಕವಾಗಿ ನಿರ್ಧರಿಸುವುದು ಅಗತ್ಯ. ಈ ನಿರ್ವಹಣಾ ಜ್ಞಾನವನ್ನು ರೈತರು ಸ್ವತಃ ಅಳವಡಿಸಿಕೊಳ್ಳುವುದು ಕೆಲವೊಮ್ಮೆ ಕಷ್ಟಕರವಾಗುತ್ತದೆ. ಸೂಕ್ತ ಮರ–ಬೆಳೆ

ಸಂಯೋಜನೆ ಮತ್ತು ಅಂತರವನ್ನು ಆಯ್ಕೆ ಮಾಡಿದರೆ ಸ್ಪರ್ಧೆಯನ್ನು ಕಡಿಮೆ ಮಾಡಿ ಕೃಷಿ ಉತ್ಪಾದಕತೆಯನ್ನು ಕಾಪಾಡಬಹುದು.

ನೀರಿನ ನಿರ್ವಹಣೆ

ನೀರಿನ ಲಭ್ಯತೆಯೂ ಮತ್ತೊಂದು ಪ್ರಮುಖ ಅಡಚಣೆಯಾಗಿದೆ. ಹೊಸದಾಗಿ ನೆಟ್ಟ ಮರಗಳಿಗೆ ಆರಂಭಿಕ ವರ್ಷಗಳಲ್ಲಿ ನಿಯಮಿತ ನೀರಾವರಿ ಅಗತ್ಯವಾಗಬಹುದು. ನೀರಿನ ಲಭ್ಯತೆ ಸೀಮಿತವಾಗಿರುವ ಪ್ರದೇಶಗಳಲ್ಲಿ ಮರ ಮತ್ತು ಮಧ್ಯಂತರ ಬೆಳೆ ಎರಡಕ್ಕೂ ನೀರು ಒದಗಿಸುವುದು ಸವಾಲಾಗುತ್ತದೆ. ಆದ್ದರಿಂದ ಕೃಷಿಅರಣ್ಯ ಮಾದರಿಯನ್ನು ಆಯ್ಕೆ ಮಾಡುವ ಮೊದಲು ಸ್ಥಳೀಯ ಜಲಸಂಪನ್ಮೂಲಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು ಅಗತ್ಯ. ಕಡಿಮೆ ನೀರಿನ ಅಗತ್ಯವಿರುವ ಸ್ಥಳೀಯ ಮರ ಜಾತಿಗಳ ಆಯ್ಕೆ, ಮಳೆನೀರು ಸಂಗ್ರಹಣೆ ಮತ್ತು ಮಣ್ಣಿನ ತೇವಾಂಶ ಸಂರಕ್ಷಣಾ ಕ್ರಮಗಳು ಈ ಸಮಸ್ಯೆಯನ್ನು ಕಡಿಮೆ ಮಾಡಲು ನೆರವಾಗಬಹುದು.

ಆದಾಯ ದೊರೆಯಲು ತೆಗೆದುಕೊಳ್ಳುವ ದೀರ್ಘ ಅವಧಿ

ರೈತರ ದೃಷ್ಟಿಯಿಂದ ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ ಮರಗಳಿಂದ ಆದಾಯ ದೊರೆಯಲು ಬೇಕಾಗುವ ದೀರ್ಘ ಅವಧಿ. ತೇಗ, ರಕ್ತಚಂದನ ಮುಂತಾದ ಮರಗಳಿಂದ ಗಮನಾರ್ಹ ಆದಾಯ ಪಡೆಯಲು ಸುಮಾರು 20ರಿಂದ25 ವರ್ಷಗಳವರೆಗೆ ಕಾಯಬೇಕಾಗಬಹುದು. ಅಂದರೆ ಮರಗಳ ಮೇಲೆ ಮಾಡಿದ ಹೂಡಿಕೆ ದೀರ್ಘಕಾಲದವರೆಗೆ ಸ್ಥಗಿತವಾಗಿರುತ್ತದೆ. ಆದರೆ ರೈತರಿಗೆ ಕುಟುಂಬದ ಖರ್ಚು, ಶಿಕ್ಷಣ, ಕೃಷಿ ಸಾಲ ಮತ್ತು ಇತರ ತುರ್ತು ಅಗತ್ಯಗಳಿಗೆ ನಿರಂತರ ನಗದು ಹರಿವು ಅಗತ್ಯ. ಈ ಹಿನ್ನೆಲೆಯಲ್ಲಿ ದೀರ್ಘಾವಧಿಯ ಮರಗಳೊಂದಿಗೆ ಆರಂಭಿಕ ವರ್ಷಗಳಲ್ಲಿ ಆದಾಯ ನೀಡುವ ಅಂತರಬೆಳೆಗಳು, ಹಣ್ಣಿನ ಬೆಳೆಗಳು ಅಥವಾ ಇತರ ಕೃಷಿ ಚಟುವಟಿಕೆಗಳನ್ನು ಸಂಯೋಜಿಸುವುದು ಮುಖ್ಯವಾಗುತ್ತದೆ.

ಮಾರುಕಟ್ಟೆಯ ಅನಿಶ್ಚಿತತೆ

ಮಾರುಕಟ್ಟೆಯ ಅನಿಶ್ಚಿತತೆಯೂ ಕೃಷಿಅರಣ್ಯ ಅಳವಡಿಕೆಗೆ ಪ್ರಮುಖ ಅಡ್ಡಿಯಾಗಿದೆ. ಹೂವು ಮತ್ತು ದ್ರಾಕ್ಷಿಯಂತಹ ಬೆಳೆಗಳಿಗೆ ಸ್ಥಳೀಯವಾಗಿ ಖರೀದಿದಾರರು ದೊರೆಯುವುದರಿಂದ ಅವುಗಳ ಮಾರಾಟದ ಬಗ್ಗೆ ರೈತರಿಗೆ ಹೆಚ್ಚಿನ ವಿಶ್ವಾಸವಿರುತ್ತದೆ. ಆದರೆ ಮರಗಳನ್ನು ಬೆಳೆಸಿದ ನಂತರ ಅವುಗಳನ್ನು ಯಾವಾಗ, ಎಲ್ಲಿ ಮತ್ತು ಯಾವ ಬೆಲೆಗೆ ಮಾರಾಟ ಮಾಡಬಹುದು ಎಂಬ ಕುರಿತು ಸ್ಪಷ್ಟತೆ ಇಲ್ಲದಿರುವುದು ರೈತರಲ್ಲಿ ಹೂಡಿಕೆಯ ಬಗ್ಗೆ ಹಿಂಜರಿಕೆಯನ್ನು ಉಂಟುಮಾಡುತ್ತದೆ. ದೀರ್ಘಾವಧಿಯ ಹೂಡಿಕೆಗೆ ಸ್ಥಿರ ಮಾರುಕಟ್ಟೆ ಮತ್ತು ಬೆಲೆ ವ್ಯವಸ್ಥೆ ಅಗತ್ಯವಾಗುತ್ತದೆ.

ಮರಗಳ ರಕ್ಷಣೆ ಮತ್ತು ನಿರ್ವಹಣಾ ವೆಚ್ಚ

ಮರಗಳ ರಕ್ಷಣೆಯೂ ರೈತರಿಗೆ ಹೆಚ್ಚುವರಿ ವೆಚ್ಚವನ್ನು ಉಂಟುಮಾಡಬಹುದು. ಶ್ರೀಗಂಧ ಮತ್ತು ರಕ್ತಚಂದನದಂತಹ ಮೌಲ್ಯಯುತ ಮರಗಳ ಸಂದರ್ಭದಲ್ಲಿ ಕಳ್ಳತನದ ಭಯದಿಂದ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸುವ ಅಗತ್ಯ ಎದುರಾಗಬಹುದು. ಶ್ರೀ ಮಂಜುನಾಥ್ ಅವರು ಮುಂದಿನ ದಿನಗಳಲ್ಲಿ ಸುಮಾರು 10 ಅಡಿ ಎತ್ತರದ ಕಾಂಪೌಂಡ್ ನಿರ್ಮಿಸುವ ಯೋಜನೆಯನ್ನು ಹೊಂದಿದ್ದಾರೆ. ಇಂತಹ ಭದ್ರತಾ ವ್ಯವಸ್ಥೆಯ ವೆಚ್ಚವು ಆರಂಭಿಕ ಹೂಡಿಕೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಭವಿಷ್ಯದಲ್ಲಿ ಮರಗಳಿಗೆ ಹೆಚ್ಚಿನ ಮೌಲ್ಯ ದೊರೆಯುವ ನಿರೀಕ್ಷೆಯಿದ್ದರೂ, ಆ ಆಸ್ತಿಯನ್ನು ರಕ್ಷಿಸಲು ಹೆಚ್ಚುವರಿ ಹಣ ಮತ್ತು ಸಮಯ ಬೇಕಾಗುತ್ತದೆ.

ಸರ್ಕಾರಿ ನೆರವು ಮತ್ತು ಮಾರ್ಗದರ್ಶನ

ಕೃಷಿಅರಣ್ಯಕ್ಕೆ ಸಂಬಂಧಿಸಿದ ಸರ್ಕಾರಿ ನೆರವು ವಿವಿಧ ಹಂತಗಳಲ್ಲಿ ಲಭ್ಯವಿರಬಹುದಾದರೂ, ಅದರ ಕುರಿತು ಮಾಹಿತಿ, ಅರ್ಜಿ ಪ್ರಕ್ರಿಯೆ, ಅರ್ಹತೆ, ಅಗತ್ಯ ದಾಖಲೆಗಳು ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ರೈತರಿಗೆ ಸ್ಪಷ್ಟ ಮಾರ್ಗದರ್ಶನ ದೊರೆಯುವುದು ಅತ್ಯಂತ ಮುಖ್ಯ. ಕೆಲವು ರೈತರು ಆರಂಭಿಕ ಹಂತದಲ್ಲಿ ನೆರವು ದೊರೆತಿದ್ದರೂ, ನಂತರದ ಹಂತಗಳಲ್ಲಿ ನೆರವು ದೊರೆಯದಿರುವ ಅನುಭವವನ್ನು ಹಂಚಿಕೊಂಡಿದ್ದಾರೆ. ಇದರಿಂದ ಯೋಜನೆಯ ಅಸ್ತಿತ್ವಕ್ಕಿಂತ ಅದರ ನಿರಂತರ ಅನುಷ್ಠಾನ ಮತ್ತು ರೈತರೊಂದಿಗೆ ಪರಿಣಾಮಕಾರಿ ಸಂಪರ್ಕ ಹೆಚ್ಚು ಮುಖ್ಯವಾಗುತ್ತದೆ.

ಸರ್ಕಾರಿ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಅಥವಾ ರೈತರಿಗೆ ಸರಿಯಾದ ಸಂಪರ್ಕ ವ್ಯಕ್ತಿ ದೊರೆಯದಿರುವುದು ಕೃಷಿಅರಣ್ಯದ ಅಳವಡಿಕೆಯನ್ನು ನಿಧಾನಗೊಳಿಸಬಹುದು. ಆದ್ದರಿಂದ ಯೋಜನೆಗಳ ಮಾಹಿತಿ, ಅರ್ಜಿ ಪ್ರಕ್ರಿಯೆ, ಅರ್ಹತೆ ಮತ್ತು ಅನುಸರಣೆ ಕುರಿತು ಸರಳ ಹಾಗೂ ಸ್ಪಷ್ಟ ಮಾರ್ಗದರ್ಶನ ರೈತರಿಗೆ ತಲುಪಬೇಕು. ಅದೇ ಸಂದರ್ಭದಲ್ಲಿ, ಸರಿಯಾದ ಮಾಹಿತಿ ಮತ್ತು ತಾಂತ್ರಿಕ ಮಾರ್ಗದರ್ಶನ ದೊರೆತರೆ ಕೃಷಿಅರಣ್ಯವನ್ನು ಅಳವಡಿಸಿಕೊಳ್ಳಲು ರೈತರು ಸಿದ್ಧರಿದ್ದಾರೆ ಎಂಬ ಸಕಾರಾತ್ಮಕ ಅಭಿಪ್ರಾಯವು ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

ರೈತರ ಅನುಭವದಿಂದ ಕಲಿಯುವ ಅಗತ್ಯ

ಕೆಲವು ಅನುಭವಿ ರೈತರು ತಮ್ಮ ಅನುಭವಗಳನ್ನು ದಾಖಲಿಸಿಕೊಂಡು, ಮುಂದಿನ ಪೀಳಿಗೆಗೆ ಮತ್ತು ಇತರ ರೈತರಿಗೆ ಉಪಯುಕ್ತವಾಗುವಂತೆ ಕೃಷಿ ಚಟುವಟಿಕೆಗಳ ಮಾಹಿತಿಯನ್ನು ಹಂಚಿಕೊಳ್ಳುವ ಅಗತ್ಯವನ್ನು ಒತ್ತಿಹೇಳುತ್ತಾರೆ. ಇಂತಹ ಸ್ಥಳೀಯ ಅನುಭವಗಳನ್ನು ವೈಜ್ಞಾನಿಕ ಮಾಹಿತಿಯೊಂದಿಗೆ ಸಂಯೋಜಿಸಿ ಗ್ರಾಮ ಮಟ್ಟದಲ್ಲಿ ಹಂಚಿಕೊಳ್ಳುವುದು ಕೃಷಿಅರಣ್ಯದ ವಿಸ್ತರಣೆಗೆ ಪರಿಣಾಮಕಾರಿ ಮಾರ್ಗವಾಗಬಹುದು. ರೈತರ ಅನುಭವ, ಸ್ಥಳೀಯ ಜ್ಞಾನ ಮತ್ತು ವೈಜ್ಞಾನಿಕ ತಂತ್ರಜ್ಞಾನಗಳ ಸಮನ್ವಯವು ಪ್ರಾಯೋಗಿಕ ಹಾಗೂ ಸ್ಥಳೀಯವಾಗಿ ಸೂಕ್ತವಾದ ಕೃಷಿ–ಅರಣ್ಯ ಮಾದರಿಗಳನ್ನು ರೂಪಿಸಲು ಸಹಾಯ ಮಾಡುತ್ತದೆ.

ಮುಂದಿನ ದಾರಿ

ಕೃಷಿ–ಅರಣ್ಯವೆಂದರೆ ಕೇವಲ ಹೊಲದಲ್ಲಿ ಮರಗಳ ಸಂಖ್ಯೆಯನ್ನು ಹೆಚ್ಚಿಸುವ ಪದ್ಧತಿಯಲ್ಲ. ಯಾವ ಮರ?, ಎಷ್ಟು ಅಂತರದಲ್ಲಿ?, ಎಷ್ಟು ವರ್ಷಗಳ ನಿರ್ವಹಣೆ?, ಮಧ್ಯಂತರದಲ್ಲಿ ಯಾವ ಬೆಳೆ?, ಎಷ್ಟು ಹೂಡಿಕೆ? ಮತ್ತು ಕೊನೆಯಲ್ಲಿ ಯಾರಿಗೆ, ಎಲ್ಲಿ ಮತ್ತು ಯಾವ ಬೆಲೆಗೆ ಮಾರಾಟ? ಎಂಬ ಪ್ರಶ್ನೆಗಳಿಗೆ ರೈತನ ಪರಿಸ್ಥಿತಿಗೆ ಅನುಗುಣವಾದ ಸ್ಪಷ್ಟ ಉತ್ತರ ದೊರೆಯುವಂತೆ ಯೋಜಿಸುವ ವ್ಯವಸ್ಥೆಯಾಗಿದೆ.

ರೈತರ ಸ್ಥಳೀಯ ಅನುಭವ ಮತ್ತು ವೈಜ್ಞಾನಿಕ ತಂತ್ರಜ್ಞಾನವನ್ನು ಸಮನ್ವಯಗೊಳಿಸಿ, ಸೂಕ್ತ ಮರ–ಬೆಳೆ ಸಂಯೋಜನೆ, ಗುಣಮಟ್ಟದ ಸಸಿಗಳ ಲಭ್ಯತೆ, ನೀರಿನ ನಿರ್ವಹಣೆ, ಆರಂಭಿಕ ವರ್ಷಗಳಲ್ಲಿ ಆದಾಯ ನೀಡುವ ಅಂತರಬೆಳೆಗಳು, ಮಾರುಕಟ್ಟೆ ಸಂಪರ್ಕ ಹಾಗೂ ಪರಿಣಾಮಕಾರಿ ಸರ್ಕಾರಿ ಮಾರ್ಗದರ್ಶನವನ್ನು ಒದಗಿಸಿದರೆ ಕೃಷಿಅರಣ್ಯದ ಅಳವಡಿಕೆ ಹೆಚ್ಚಾಗಬಹುದು. ಈ ಮೂಲಕ ಕೃಷಿ ಭೂಮಿಯ ಉತ್ಪಾದಕತೆಯನ್ನು ಕಾಪಾಡುವುದರ ಜೊತೆಗೆ ರೈತರ ಆದಾಯದ ವೈವಿಧ್ಯತೆ, ಮಣ್ಣಿನ ಸಂರಕ್ಷಣೆ, ಜೀವವೈವಿಧ್ಯ ಮತ್ತು ಪರಿಸರ ಸುಸ್ಥಿರತೆಯನ್ನು ಸಹ ಬಲಪಡಿಸಬಹುದು.

ಹೀಗಾಗಿ ಕೃಷಿಅರಣ್ಯದ ಯಶಸ್ಸು ಕೇವಲ ಮರಗಳನ್ನು ನೆಡುವುದರಲ್ಲಿ ಇಲ್ಲ; ರೈತರ ಅಗತ್ಯಗಳಿಗೆ ಹೊಂದುವ ಸರಿಯಾದ ಮರವನ್ನು, ಸರಿಯಾದ ಸ್ಥಳದಲ್ಲಿ, ಸರಿಯಾದ ಅಂತರದಲ್ಲಿ ಮತ್ತು ಸರಿಯಾದ ನಿರ್ವಹಣೆಯೊಂದಿಗೆ ಬೆಳೆಸಿ, ಅದರ ಉತ್ಪನ್ನಕ್ಕೆ ಖಚಿತ ಮಾರುಕಟ್ಟೆ ಕಲ್ಪಿಸುವುದರಲ್ಲಿ ಇದೆ. ರೈತರ ಅನುಭವ ಮತ್ತು ವಿಜ್ಞಾನವನ್ನು ಸೇರ್ಪಡೆಗೊಳಿಸಿದಾಗ ಮಾತ್ರ ಕೃಷಿಅರಣ್ಯವು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ವ್ಯಾಪಕವಾಗಿ ಅಳವಡಿಕೆಯಾಗುವ ಸಾಧ್ಯತೆ ಇದೆ.

ಲೇಖಕರ ಸಂಪರ್ಕಕ್ಕಾಗಿ: +91 9900544555







ಜುಲೈ–ಸೆಪ್ಟೆಂಬರ್ 2026 ರಲ್ಲಿ ನಡೆದ ಕಾರ್ಯಕ್ರಮಗಳು.

1. **ದಿನಾಂಕ: 01–07–2026** ರಂದು ಐ.ಎ.ಎಫ್.ಟಿ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರೊಂದಿಗೆ ಮಾನ್ಯ ಕಾರ್ಯಕಾರಿ ಅಧ್ಯಕ್ಷರು, ಸಭಾಂಗಣ, ಮೊದಲನೇ ಮಹಡಿ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಕರ್ನಾಟಕ ರಾಜ್ಯಾದ್ಯಂತ 5 ಕೋಟಿ ಸಸಿಗಳನ್ನು ನೆಡುವ ಕುರಿತಂತೆ ಸಂಸ್ಥೆಯ ಭಾಗವಹಿಸುವಿಕೆಯ ಕುರಿತಂತೆ ಚರ್ಚಿಸಲಾಯಿತು.

2. **ದಿನಾಂಕ: 07–07–2026** ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ನಿಗಮ ನಿಯಮಿತ, ವನವಿಕಾಸ, 3ನೇ ಮಹಡಿ, 18ನೇ ಅಡ್ಡರಸ್ತೆ, ಕಾರ್ಯಕಾರಿ ಸಮಿತಿ ಸಭೆಯನ್ನು ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ನಡೆಸಲಾಯಿತು.

3. **ದಿನಾಂಕ: 20–07–2026** ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರೊಂದಿಗೆ ರಾಜ್ಯಾದ್ಯಂತ ರಾಜ್ಯದಲ್ಲಿ 5 ಕೋಟಿ ಸಸಿಗಳ ಅರಣ್ಯೀಕರಣ ಮತ್ತು ಕೆರೆಗಳ ಪುನಶ್ಚೇತನದ ಬೃಹತ್ ಯೋಜನೆ ಪ್ರಾರಂಭಿಸಲಾಗಿದ್ದು, ಈ ಕುರಿತಂತೆ ಮಾನ್ಯ ಕಾರ್ಯಕಾರಿ ಅಧ್ಯಕ್ಷರು, ಕೆ.ಎಸ್.ಎಲ್.ಎಸ್.ಎ ಇವರ ಅಧ್ಯಕ್ಷತೆಯಲ್ಲಿ, ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರು, ವಿವಿಧ ಸರ್ಕಾರೇತರ ಸಂಸ್ಥೆಗಳು ಹಾಗೂ ಐ.ಎ.ಎಫ್.ಟಿ ಸಂಸ್ಥೆ ಒಳಗೊಂಡಂತೆ ಕರ್ನಾಟಕ ಉಚ್ಚ ನ್ಯಾಯಾಲಯ, ಪ್ಯಾಟ್ರನ್ ಇನ ಚೀಫ್ ಹಾಲ್, 2ನೇ ಮಹಡಿ, ಬೆಂಗಳೂರಿನಲ್ಲಿ ಈ ಕೆಳಗಿನ ವಿಷಯಗಳ ಕುರಿತಂತೆ ಸಭೆಯನ್ನು ನಡೆಸಲಾಯಿತು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಗೌರವಾನ್ವಿತ ಕಾರ್ಯನಿರ್ವಾಹಕ ಅಧ್ಯಕ್ಷರ ನಿರ್ದೇಶನದಂತೆ, KSLSA, IAFT, ವಿವಿಧ ಸರ್ಕಾರದ ಇಲಾಖೆಗಳು ಹಾಗೂ NGOಗಳ ಸಹಯೋಗದಲ್ಲಿ ಈ ಹಿನ್ನೆಲೆಯಲ್ಲಿ, ಕೆಳಕಂಡ ಮೂಲಸೌಕರ್ಯ ಸಂಬಂಧಿತ ವಿಷಯಗಳ ಕುರಿತು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ:

ಎಲ್ಲಾ ಸರ್ಕಾರಿ ಇಲಾಖೆಗಳು, NGOಗಳು ಹಾಗೂ ಖಾಸಗಿ ಸಂಸ್ಥೆಗಳಿಂದ ಅರಣ್ಯೀಕರಣಕ್ಕಾಗಿ ಭೂಮಿ/ಸ್ಥಳಗಳ ಗುರುತಿಸುವಿಕೆ ಕುರಿತು ಚರ್ಚಿಸುವುದು.

ಎಲ್ಲಾ ಜಿಲ್ಲೆಗಳಲ್ಲಿ ಬೇಡಿಕೆಯ ಆಧಾರದ ಮೇಲೆ ಬೀಜ ಬಿತ್ತನೆ ಹಾಗೂ ಸಸಿಗಳ ಪೂರೈಕೆಯ ನಿರ್ವಹಣೆ ಮತ್ತು ಪೂರೈಕೆಯಾದ ಸಸಿಗಳನ್ನು ನೆಡುವ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸುವುದು.

ಸಸಿಗಳನ್ನು ನೆಡಲು ಗುರುತಿಸಲಾದ ಸ್ಥಳಗಳ ಜಿಯೋ–ಮ್ಯಾಪಿಂಗ್ ಹಾಗೂ ನೆಟ್ಟ ಸಸಿಗಳ ಮೇಲ್ವಿಚಾರಣೆ/ರಕ್ಷಣೆಗೆ ಆ್ಯಪ್ ಅಭಿವೃದ್ಧಿಪಡಿಸುವ ಕುರಿತು ಚರ್ಚಿಸುವುದು.

ರಾಜ್ಯದ ವಿವಿಧ ವಲಯಗಳಲ್ಲಿ ಸ್ಥಳ/ಹವಾಮಾನ/ಪ್ರದೇಶ ಆಧಾರಿತ ಸಸಿ ನೆಡುವಿಕೆ, 5 ಕೋಟಿ ಸಸಿಗಳನ್ನು ನೆಡಲು ಬೇಕಾಗುವ ವೆಚ್ಚ, ನೆಟ್ಟ ನಂತರದ ಆರೈಕೆ, ರಕ್ಷಣೆ ಹಾಗೂ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸಲು ಕಾರ್ಯಯೋಜನೆಯನ್ನು IAFT ವತಿಯಿಂದ ಸಲ್ಲಿಸುವಂತೆ ಕೋರಲಾಗಿದೆ.

ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅರಣ್ಯೀಕರಣ ಸಮಿತಿಗಳನ್ನು ರಚಿಸುವ ಕುರಿತು ಚರ್ಚಿಸುವುದು.

ಸಂಸ್ಥೆಯ ವತಿಯಿಂದ ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ (ನಿ), ಅಧ್ಯಕ್ಷರು, ಡಾ. ಎಸ್. ರಮೇಶ್, ಭಾ.ಅ.ಸೇ (ನಿ), ಕಾರ್ಯದರ್ಶಿಗಳು, ಶ್ರೀ ಪ್ರತಾಪ್ ಹೆಗಡೆ, ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ (ನಿ) ಮಾಜಿ ಕಾರ್ಯದರ್ಶಿಗಳು, ಐ.ಎ.ಎಫ್.ಟಿ. ಸದಸ್ಯರು, ಶ್ರೀ ಮಲ್ಲೇಶ್ ಲಿಂಗಾಚಾರ್ ರವರು ಭಾಗವಹಿಸಿದ್ದರು.

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ (ನಿ) ಮಾಜಿ ಕಾರ್ಯದರ್ಶಿಗಳು, ಐ.ಎ.ಎಫ್.ಟಿ. ಇವರು ಸಂಸ್ಥೆಯ ವತಿಯಿಂದ ಯೋಜನೆಯ ಸಂಬಂಧಿಸಿದಂತೆ ಪಿ.ಪಿ.ಟಿ. ಮೂಲಕ ವಿವರಿಸಿದರು. ಶ್ರೀ ಮಲ್ಲೇಶ್ ಲಿಂಗಾಚಾರ್ ರವರು ಈ ಯೋಜನೆಗಾಗಿ ಸಿದ್ಧಪಡಿಸುತ್ತಿರುವ ಜಾಲತಾಣದ ಬಗ್ಗೆ ವಿವರಿಸಿದರು.

4. **ದಿನಾಂಕ: 31–07–2026** ರಂದು ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ನಿಗಮ ನಿಯಮಿತ, ವನವಿಕಾಸ, 3ನೇ ಮಹಡಿ, 18ನೇ ಅಡ್ಡರಸ್ತೆ, ಕಾರ್ಯಕಾರಿ ಸಮಿತಿ ಸಭೆಯನ್ನು ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ನಡೆಸಿ ಕೆ.ಎಸ್.ಎಲ್.ಎಸ್.ಎ ಯೋಜನೆಗೆ ಸಂಬಂಧಿಸಿದಂತೆ 5 ಕೋಟಿ ಗಿಡ ನೆಡುವ ಕಾರ್ಯಕ್ರಮಕ್ಕೆ IAFT ವತಿಯಿಂದ ಕೈಗೊಳ್ಳಬೇಕಾದ ಕ್ರಮಗಳು, ಸಸಿ ಉತ್ಪಾದನೆ, ನೆಡುವಿಕೆ ಮತ್ತು ನಿರ್ವಹಣೆಯ ಕಾರ್ಯಯೋಜನೆ, ಜಿಯೋ–ರೆಫರೆನ್ಸಿಂಗ್, ಮೇಲ್ವಿಚಾರಣೆ ಮತ್ತು ಪ್ರಗತಿ ವರದಿ ವ್ಯವಸ್ಥೆ, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳೊಂದಿಗೆ ಸಮನ್ವಯ ಇತ್ಯಾದಿ ವಿಷಯಗಳನ್ನು ಚರ್ಚಿಸಲಾಯಿತು.

5. **ದಿನಾಂಕ: 10–08–2026** ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರು 5 ಕೋಟಿ ಸಸಿ ನೆಡುವ ಯೋಜನೆಗೆ ಬೇಕಾದ ಒಂದು ಪೋರ್ಟಲ್ ಅನ್ನು ವಿವಿಧ NGOಗಳ ಸಹಯೋಗದಲ್ಲಿ ಸಿದ್ಧಪಡಿಸುವ ಕುರಿತಂತೆ ಐ.ಎ.ಎಫ್.ಟಿ ಮತ್ತು ವಿವಿಧ NGOಗಳ ಸಭೆ ನಡೆಸಲಾಯಿತು.

6. **ದಿನಾಂಕ: 25–08–2026** ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಯೋಜನೆಯ ಅನುಷ್ಠಾನದಲ್ಲಿ ರೋಟರಿ ಇಂಟರ್ ನ್ಯಾಷನಲ್ ಭಾಗವಹಿಸುವಿಕೆಯ ಕುರಿತಂತೆ ಸಮಾಲೋಚನೆ ನಡೆಸಲಾಯಿತು.

7. **ದಿನಾಂಕ: 01–09–2026** ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ಐ.ಎ.ಎಫ್.ಟಿ. ಸಂಸ್ಥೆಯ ಕಛೇರಿಯಲ್ಲಿ ನಡೆಸಲಾಯಿತು.

8. **ದಿನಾಂಕ: 15–09–2026** ರಂದು ಪ್ರಶಸ್ತಿ ಉಪಸಮಿತಿ ಸಭೆಯನ್ನು ಐ.ಎ.ಎಫ್.ಟಿ. ಸಂಸ್ಥೆಯ ಕಛೇರಿಯಲ್ಲಿ ನಡೆಸಲಾಯಿತು. ದಿವಂಗತ ಎ.ಎ. ಸದಾಶಿವಯ್ಯ ಮತ್ತು ..ಎಚ್. ಮಲ್ಲಿಕಾರ್ಜುನ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪ್ರಶಸ್ತಿ ಆಯ್ಕೆ ಸಮಿತಿಯು ಪರಿಶೀಲನೆ ನಡೆಸಿ ಪ್ರಶಸ್ತಿಗಳಿಗೆ ಅರ್ಹರನ್ನು ಆಯ್ಕೆ ಮಾಡಲಾಯಿ.

9. **ದಿನಾಂಕ–26–09–2026,** ರಂದು ಐ.ಎ.ಎಫ್.ಟಿ. ಸಂಸ್ಥೆಯ 2025–2026 ನೇ ಸಾಲಿನ 13ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಜಿ.ಕೆ. ವೀರೇಶ್ ಸಭಾಂಗಣ, ಅಲ್ಯೂಮ್ನಿ ಅಸೋಸಿಯೇಷನ್ (ಯು.ಎ.ಎಸ್–ಬಿ), ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು ಇಲ್ಲಿ ನಡೆಸಲಾಯಿತು.

10. **ದಿನಾಂಕ–26–09–2026,** ರಂದು ಐ.ಎ.ಎಫ್.ಟಿ. ಸಂಸ್ಥೆಯ 2026–2027ನೇ ಸಾಲಿನ ಎ.ಎಸ್.ಸದಾಶಿವಯ್ಯ ಹಾಗೂ ಟಿ.ಹೆಚ್.ಮಲ್ಲಿಕಾರ್ಜುನ ಕೃಷಿಅರಣ್ಯ ಸಾಧಕ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

11. **ಪ್ರಶಸ್ತಿ ಪುರಸ್ಕೃತರು:**

(ಅ) ಎ.ಎಸ್.ಸದಾಶಿವಯ್ಯ ಕೃಷಿಅರಣ್ಯ ಸಾಧಕ ರಾಜ್ಯ ಮಟ್ಟದ ಪ್ರಶಸ್ತಿ

1. ಶ್ರೀಮತಿ. ಶಾಂತಮ್ಮ ವೈ. ಸಿ., ಕಗ್ಗಲಹಳ್ಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–ರೈತರು,

2.ಶ್ರೀ ಮಂಜುನಾಥ ಗಣಪತಿ ನಾಯಕ್, ಉಪ ವಲಯ ಅರಣ್ಯ ಅಧಿಕಾರಿಗಳು, ಉಡುಪಿ ಸಾಮಾಜಿಕ ವಲಯ–ಮುಂಚೂಣಿ ಅರಣ್ಯ ಸಿಬ್ಬಂದಿ,

(ಬ) ಟಿ.ಹೆಚ್.ಮಲ್ಲಿಕಾರ್ಜುನ ಕೃಷಿಅರಣ್ಯ ಸಾಧಕ ರಾಜ್ಯ ಮಟ್ಟದ ಪ್ರಶಸ್ತಿ

1.ಅರುಣ್ ಕುಮಾರ್ ಎಸ್.ಆರ್., ಶೆಟ್ಟಿಕೆರೆ, ತುಮಕೂರು ಜಿಲ್ಲೆ– ರೈತರು.

ಸಂಸ್ಥೆಯ ವತಿಯಿಂದ ಪ್ರಶಸ್ತಿ ಪುರಸ್ಕೃತರನ್ನು ಶಾಲು, ಹಾರ, ಮೈಸೂರ್ ಪೇಟೆ ಹೊದ್ದಿಸಿ, ಪ್ರಶಸ್ತಿ ಪತ್ರ, ಡ್ರೈಫ್ರೂಟ್ ಬಾಕ್ಸ್, ನೆನಪಿನ ಕಾಣಿಕೆ (ಮೊಮೆಂಟೊ) ಹಾಗೂ ಗೌರವಧನವನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರು ತಮ್ಮ ಕೃಷಿ ಅರಣ್ಯ ಅನುಭವಗಳನ್ನು ಕುರಿತು ಸಮಾರಂಭದಲ್ಲಿ ಹಂಚಿಕೊಂಡಿರುತ್ತಾರೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಮೀನಾಕ್ಷಿ ನೇಗಿ, ಭಾ.ಅ.ಸೇ, ಪ್ರ.ಮು.ಅ.ಸಂ (ಅ.ಪ.ಮು) ಹಾಗೂ ಶ್ರೀ ಆರ್.ಎಂ. ಪಾಲಣ್ಣರವರು ಪಾಲ್ಗೊಂಡಿರುತ್ತಾರೆ. ಪದ್ಮಶ್ರೀ ಪುರಸ್ಕೃತರಾದ ಡಾ. ಎಸ್. ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ ಬೆಂಗಳೂರು, ಶ್ರೀ ಅಜಯ್ ಮಿಶ್ರ ಭಾ.ಅ.ಸೇ (ನಿ) ಇವರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

12. **ದಿನಾಂಕ–26–09–2026,** ರಂದು ಐ.ಎ.ಎಫ್.ಟಿ. ಸಂಸ್ಥೆಯ ಸದಸ್ಯರಾದ ಡಾ. ಎಸ್. ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ ಇವರಿಗೆ 2025ನೇ ಸಾಲಿನ ಪದ್ಮಶ್ರೀ ಪುರಸ್ಕಾರ ಪಡೆದಿದ್ದರಿಂದ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.

13. **ದಿನಾಂಕ–26–09–2026,** ರಂದು ಐ.ಎ.ಎಫ್.ಟಿ. ಸಂಸ್ಥೆಯ ವತಿಯಿಂದ ಡಾ. ಮೀನಾಕ್ಷಿ ನೇಗಿ, ಭಾ.ಅ.ಸೇ, ಪ್ರ.ಮು.ಅ.ಸಂ (ಅ.ಪ.ಮು) ರವರನ್ನು ಭಾರತ್ ಗೌರವ್ ಮತ್ತು ಲೈಫ್ ಟೈಮ್ ಅಚೀವ್‌ಮೆಂಟ್ ಅವಾರ್ಡ್ 2026 ಪುರಸ್ಕೃತರಾದ ಪ್ರಯುಕ್ತ ಗೌರವಿಸಲಾಯಿತು. ಶ್ರೀಮತಿ ಅನಿತಾ ಸದಾಶಿವಯ್ಯ ಹಾಗೂ ಅವರ ಮಗ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಕಾರ್ಯದರ್ಶಿಗಳು

MSIL ಚಿಟ್ಸ್



ವೈಶಿಷ್ಟ್ಯಗಳು

- ವಿಶ್ವಾಸಾರ್ಹ ಸರ್ಕಾರಿ ಸಂಸ್ಥೆ
- ಪಾರದರ್ಶಕ ಕಾರ್ಯಾಚರಣೆ
- ಸುಲಭ ಹಣದ ಲಭ್ಯತೆ
- ಆಕರ್ಷಕ ಗಣಕೆಯ ಅವಕಾಶ
- ತೊಡಗಿಸಿದ ಹಣಕ್ಕೆ ಭದ್ರತೆ

ಹೊಸ ಚಿಟ್‌ಗಳಿಗೆ ನೊಂದಣಿ ಪ್ರಾರಂಭ

ಹಣಕಾಸಿನ ಅಗತ್ಯಗಳಿಗೆ ತಕ್ಕಂತೆ ಎಂಎಸ್‌ಐಎಲ್‌ನಲ್ಲಿ ಅನೇಕ ಚಿಟ್ ಯೋಜನೆಗಳು ಲಭ್ಯವಿದೆ.
ನೀವೂ ಕೂಡ ನಿಮ್ಮ ಅಗತ್ಯಗಳಿಗೆ ಸರಿಯಾದ ಚಿಟ್ ಯೋಜನೆಗಳಲ್ಲಿ ನೊಂದಾಯಿಸಿ.

ಮಾಸಿಕ ಚಂದಾ (ರೂ.)	ಅವಧಿ (ತಿಂಗಳು)	ಚಿಟ್ ಮೌಲ್ಯ (ರೂ.)
2500	40	1 Lakh
5000	40	2 Lakhs
10000	40	4 Lakhs
10000	50	5 Lakhs
12500	40	5 Lakhs
15000	40	6 Lakhs
10000	60	6 Lakhs
15000	60	9 Lakhs
25000	40	10 Lakhs

ಮಾಸಿಕ ಚಂದಾ (ರೂ.)	ಅವಧಿ (ತಿಂಗಳು)	ಚಿಟ್ ಮೌಲ್ಯ (ರೂ.)
10000	100	10 Lakh
15000	100	15 Lakhs
25000	60	15 Lakhs
25000	100	25 Lakhs
50000	50	25 Lakhs
50000	100	50 Lakhs
100000	50	50 Lakhs
200000	50	1 Crore
250000	40	1 Crore

ಎಂಎಸ್‌ಐಎಲ್ ಚಿಟ್ ಫಂಡ್ಸ್ ಶಾಖಾ ಕಚೇರಿಗಳು: ■ಕನ್ನಿಂಗ್‌ಹ್ಯಾಂ ರಸ್ತೆ: 080-22353068 ಮೊ: 9844720963 ■ವಿಲ್ಸನ್‌ಗಾರ್ಡನ್: ಮೊ: 8722804212 / 6366763395 ■ಗಾಂಧಿನಗರ: 080-22204021 ಮೊ: 8722804211 ■ಚಾಮರಾಜಪೇಟೆ: 080-26704747 ಮೊ: 9844135701 ■ರಾಜಾಜಿನಗರ: 080-23429525 ಮೊ: 9844133535 ■ಜಯನಗರ: ಮೊ: 9844895975 / 6366971099 ■ವಿಜಯನಗರ: 080-23151243 ಮೊ: 9844895974 ■ಮಲ್ಲೇಶ್ವರಂ: 080-23465454 ಮೊ: 9844787398 ■ಯಶವಂತಪುರ: 080-23574622 ಮೊ: 9844895973 ■ಬಸವನಗುಡಿ: 080-26622638 ಮೊ: 8970867865 ■ಬಿ.ಟಿ.ಎಂ. ಲೇಔಟ್: ಮೊ: 8970867863 / 8088964848 ■ಆರ್.ಟಿ. ನಗರ: 080-23558866 ಮೊ: 6366971098 ■ಇಂದಿರಾನಗರ: 080-48534907 ಮೊ: 9844636704 ■ಯಲಹಂಕ: 080-28460366 ಮೊ: 8970867862 ■ಬಸವಂಗುಡಿ: 080-26699563 ಮೊ: 9844890314 ■ಮೈಸೂರು: 0821-2344100 ಮೊ: 9164000116 ■ಹುಬ್ಬಳ್ಳಿ: 0836-2358581 ಮೊ: 9164000373 ■ಕುಮಟಾಕೊರು: 0816-2956582 ಮೊ: 9844890315 ■ಮಂಗಳೂರು: 0824-2495669 ಮೊ: 9844434355 ■ರಾಣಾಗೆರೆ: 08192-233493 ಮೊ: 9164000168 ■ಕಲಬುರಗಿ: 08472-250323 ಮೊ: 9164000230 ■ಬೆಳಗಾವಿ: 0831-2474682 ಮೊ: 9164003973 ■ಕೋಲಾರ: 08152-226621 ಮೊ: 7353124100 ■ಚಿಕ್ಕಬಳ್ಳಾಪುರ: 08156-275077 ■ಶಿವಮೊಗ್ಗ: 08182-270716 ಮೊ: 6366450106 ■ಕೊಡಗು: 080-2848 7228 ಮೊ: 6366946355 ■ಚಾಮರಾಜನಗರ : ಮೊ: 9945141706/08226-225080

ಇ-ಮೇಲ್ : msil.chitfund@msilonline.com
ಭೇಟಿ ನೀಡಿ: www.msilchits.com

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಸಂಪೂರ್ಣ ಸ್ವಾಮ್ಯದ ಸಂಸ್ಥೆ)
ಚಿಟ್ ಫಂಡ್ ವಿಭಾಗ, # 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560052

@MSILonline

ರೈತರು ಶ್ರೀಗಂಧದ ಮರಗಳನ್ನು

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್‌ಗೆ

ಸಂಸ್ಥೆಯು ನಿಗದಿಪಡಿಸಿದ ದರದಲ್ಲಿ

ಸರಬರಾಜು / ಮಾರಾಟ ಮಾಡುವುದು





ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಸದರಿ ಕಾರ್ಖಾನೆಯು ವಿಶ್ವವಿಖ್ಯಾತ ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ **ಸುಮಾರು 38 ಉತ್ಪನ್ನಗಳನ್ನು ಉತ್ಪಾದಿಸುತ್ತಿದ್ದು, ಕಂಪನಿಗೆ ಮಾಸಿಕ ಸರಾಸರಿ 600 ಕೆಜಿ ಶ್ರೀಗಂಧದೆಣ್ಣೆ ಹಾಗೂ ವರ್ಷಕ್ಕೆ ಸುಮಾರು 150 ಮೆಟ್ರಿಕ್ ಟನ್‌ಗಳಷ್ಟು ಶ್ರೀಗಂಧದ ಚೇಗು ಮತ್ತು ಬೇರು [Heart-wood & roots] ಅವಶ್ಯಕತೆಯಿರುತ್ತದೆ.** ದೇಶದಾದ್ಯಂತ ಶ್ರೀಗಂಧ ಬೆಳೆಯುವ ಬೆಳೆಗಾರರು ತಮ್ಮ ಜಮೀನು ಅಥವಾ ನಿವೇಶನದಲ್ಲಿ **ಸರಾಸರಿ 20 ವರ್ಷ ಮೇಲ್ಪಟ್ಟ ಶ್ರೀಗಂಧದ ಮರಗಳಿದ್ದಲ್ಲಿ** ಪ್ರಸಕ್ತ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ / ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ದರದಲ್ಲಿ ಮಾರಾಟ ಮಾಡಲು ಇಚ್ಛಿಸಿದ್ದಲ್ಲಿ **ಕಾರ್ಖಾನೆಯೊಡನೆ ಒಡಂಬಡಿಕೆ** ಮಾಡಿಕೊಂಡು, ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಗೆ ಮಾರಾಟ ಮಾಡಲು ಕೋರಲಾಗಿದೆ.

ಸಹಿ/- ಸಹಾಯಕ ವ್ಯವಸ್ಥಾಪಕರು

ಸಂಶೋಧನೆ ಮತ್ತು ಅಭಿವೃದ್ಧಿ / ಶ್ರೀಗಂಧ ವಿಭಾಗ



ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

080-22164827, 9945405396